# ಭಾರತೀಯ ತರಗತಿಕೋಣೆಗಳಲ್ಲಿ ಸಮಗ್ರ ಸಾಕ್ಷರತಾ ಬೋಧನೆಯ ಮಾದರಿ

**ಆರಂಭಿಕ ಸಾಕ್ಷರತಾ ಉಪಕ್ರಮ**

**ಟಾಟಾ ಸಮಾಜ ವಿಜ್ಞಾನಗಳ ಸಂಸ್ಥೆ, ಹೈದರಾಬಾದ್**

**ಪ್ರಾಯೋಗಿಕ ಕೈಪಿಡಿ (12)**

**2019**

**ಟಾಟಾ ದತ್ತಿನಿಧಿಯಿಂದ ಬೆಂಬಲಿತ**

**ಈ ಕೈಪಿಡಿಯು ಆರಂಭಿಕ ಸಾಕ್ಷರತಾ ಉಪಕ್ರಮ ಸರಣಿಯ ಭಾಗವಾಗಿದೆ. ಟಾಟಾ ಸಂಸ್ಥೆಯ ಸಮಾಜ ವಿಜ್ಞಾನ ವಿಭಾಗದೊಂದಿಗೆ ಜೊತೆಗೂಡಿ ಅಜೀಂ ಪ್ರೇಮ್‌ಜಿಯ ಶಿಕ್ಷಣ ವಿಭಾಗವು ಕೈಗೊಂಡ ಅಧ್ಯಯನವಾಗಿದೆ.**

# ಭಾರತೀಯ ತರಗತಿಕೋಣೆಗಳಲ್ಲಿ ಸಮಗ್ರ ಸಾಕ್ಷರತಾ ಬೋಧನೆಯ ಮಾದರಿ

ನನ್ನ ತರಗತಿಯಲ್ಲಿ ಬಹು ಚುರುಕಾಗಿರುವ, ಬುದ್ಧಿವಂತರಾಗಿರುವ, ಸದಾ ಸಂತಸದಿಂದ ಇರುವ, ತುಂಟರಾಗಿರುವ, ಜಾಸ್ತಿ ಮಾತಾಡದ, ಮತ್ತು ನಾಚಿಕೆ ಸ್ವಭಾವದ 7 ವರ್ಷದ 18 ಮಕ್ಕಳಿದ್ದಾರೆ. ನಾನು ಅವರನ್ನು ಒಂದು ತಿಂಗಳಿಂದ ನೋಡುತ್ತಿದ್ದೇನೆ. ನಾನು ಬೆಂಗಳೂರಿನ ಒಂದು ಸರ್ಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ. ಅವರಿಗೆ ಕನ್ನಡ ಮತ್ತು ಇಂಗ್ಲೀಷ್ ಎರಡನ್ನೂ ಕಲಿಸುತ್ತಿದ್ದೇನೆ. ಕನ್ನಡ ಮಾಧ್ಯಮದ ಶಾಲೆಯಾದರೂ ಇಂಗ್ಲೀಷ್‌ಗೆ ಬಹಳ ಬೇಡಿಕೆಯಿರುವುದರಿಂದ ಅದನ್ನೂ ಕಲಿಸುತ್ತೇವೆ. 18 ಮಕ್ಕಳಿರುವ ನನ್ನ ಕ್ಲಾಸಿನಲ್ಲಿ ಬಹುತೇಕ ಮಕ್ಕಳು ಕನ್ನಡ ಮಾತನಾಡುತ್ತಾರೆ, ಕೆಲವು ತೆಲುಗು ಮತ್ತು  ಕೆಲವು ಹಿಂದಿ ಮಾತನಾಡುವ ಮಕ್ಕಳಿದ್ದಾರೆ. ಅವರೊಂದಿಗಿನ ಒಂದು ತಿಂಗಳ ಒಡನಾಟವು ನನಗೆ ಆ ಮಕ್ಕಳನ್ನು ಸ್ವಲ್ಪ ಅರ್ಥಮಾಡಿಕೊಳ್ಳಲು ಸಹಾಯ ಮಾಡಿದೆ. ಅವರು ಮನೆಯಲ್ಲಿ ಮಾತನಾಡುವ ಭಾಷೆ ಯಾವುದು, ಶಾಲೆಯಲ್ಲಿ ಯಾವ ಭಾಷೆ ಅವರಿಗೆ ಹೆಚ್ಚು ಅರ್ಥವಾಗುತ್ತೆ, ಅವರ ಕೌಟುಂಬಿಕ ಹಿನ್ನೆಲೆ, ಅವರಿಗೆ ಇಷ್ಟವಾಗುವ ತಿಂಡಿ ಊಟ, ಅವರು ಆಡಲು ಬಯಸುವ ಆಟಗಳು ಇತ್ಯಾದಿ. ನನಗೆ ಈ ಮಕ್ಕಳ ಗುಂಪಿನಲ್ಲಿ ಯಾರು ಹೆಚ್ಚು ಮತ್ತು ಕಡಿಮೆ ಮಾತನಾಡುತ್ತಾರೆಂದು ಗೊತ್ತು. ರಾಜು, ಮಲ್ಲಮ್ಮ, ಅನಿತಾ, ಹುಸೇನ್, ಕೃಷ್ಣ, ದುರ್ಗಾ, ಶ್ರೀನಿವಾಸ, ಚೈತ್ರ, ಬಾಬು, ರಂಗಪ್ಪ, ರುಬಿಯಾ, ಲಕ್ಷ್ಮೀ ಮತ್ತು ರಾಜಪ್ಪ ಕನ್ನಡ ಮಾತನಾಡುತ್ತಾರೆ. ಹುಸೇನ್, ರುಬಿಯಾ, ಮಲ್ಲಮ್ಮ ಇವರಿಗೆ ಸ್ವಲ್ಪ ಹಿಂದಿ ಗೊತ್ತು. ವೆಂಕಟೇಶ್ ಮತ್ತು ಸೀತಾ ತೆಲುಗು ಮಾತನಾಡುವ ಮಕ್ಕಳು, ಅವರು ಈಗಷ್ಟೇ ಬೆಂಗಳೂರಿಗೆ ಬಂದಿದ್ದಾರೆ ಎಲ್ಲೋ ಸ್ವಲ್ಪ ಕನ್ನಡ ಗೊತ್ತು. ಕೃಷ್ಣ, ಅನಿತಾ ಸ್ವಲ್ಪ ತೆಲುಗು ಮಾತನಾಡುತ್ತಾರೆ. ಸೂರಜ್, ಬಿಂದಿಯಾ ಹಿಂದಿ ಮಾತನಾಡುವ ಮಕ್ಕಳು, ಸುಮಾರು ಎರಡು ವರ್ಷಗಳಿಂದ ಇಲ್ಲಿದ್ದರೂ ಕನ್ನಡವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಆಗುವುದಿಲ್ಲ, ಅಷ್ಟೇ ಅಲ್ಲ ಅವರು ತುಂಬಾ ನಾಚಿಕೆ ಸ್ವಭಾವದವರು, ಇತರ ಮಕ್ಕಳೊಂದಿಗೂ ಮಾತನಾಡುವುದಿಲ್ಲ. ಆದರೆ ಬಹುತೇಕ ಮಕ್ಕಳು ಮನೆಯಲ್ಲಿ ಕನ್ನಡ ಮಾತನಾಡುತ್ತಾರೆ. ಒಂದು ಸಣ್ಣ ಮಕ್ಕಳ ಗುಂಪು ಮಾತ್ರ ಕನ್ನಡ ಕಲಿಯಬೇಕು ಮತ್ತು ಕಲಿಯಲು ಸ್ವಲ್ಪ ಕಷ್ಟಪಡಬೇಕು.

ಈ ಹಿನ್ನೆಲೆಯೊಂದಿಗೆ ನಾನು, ನನ್ನ ಮಕ್ಕಳಿಗೆ ಮುಂಬರುವ ದಿನಗಳಲ್ಲಿ ಕಲಿಕೆಯ ಬಹು ಮುಖ್ಯ ಅಂಶವಾದ ಓದುವುದು ಮತ್ತು ಬರೆಯುವುದನ್ನು ಕನ್ನಡದಲ್ಲಿ ಕಲಿಸಬೇಕು. ನನಗೀಗ ಪ್ರತಿ ಮಗುವಿನ ಸಾಮರ್ಥ್ಯದ ಅರಿವಿದ್ದರೂ, ಪ್ರತಿಮಗುವಿನ ಅವಶ್ಯಕತೆಗನುಗುಣವಾಗಿ ನನ್ನ ಪಾಠಯೋಜನೆ ತಯಾರಿಸುವುದು ಒಂದು ಸವಾಲೇ ಸರಿ. ಪ್ರತಿ ಮಗುವೂ ಕಲಿತಿರುವ ವರ್ಣಮಾಲೆಯ ಮೌಲ್ಯಮಾಪನ ಮಾಡುವುದು ನನ್ನನ್ನು ಆತಂಕಕ್ಕೆ ದೂಡುತ್ತದೆ. ಅವರೆಲ್ಲರನ್ನು ಒಂದು ಸಮಾನ ಕಲಿಕೆಯ ಹಂತಕ್ಕೆ ಹೇಗೆ ತರುವುದು? ಕೆಲವರು 5–6 ಅಕ್ಷರಗಳನ್ನೂ ಗುರುತಿಸಲಾರರು. ಕನ್ನಡ ಗೊತ್ತಿರುವ ಮಕ್ಕಳಲ್ಲೂ ಕೃಷ್ಣ, ದುರ್ಗಾ ಹಾಗೂ ಮಲ್ಲಮ್ಮ ಮಾತ್ರ ಕೆಲವು ಸರಳ ಪದಗಳನ್ನು ಓದಬಲ್ಲರು. ಉಳಿದವರು ಓದಲು ಕಷ್ಟಪಡುತ್ತಿದ್ದಾರೆ. ಕೆಲವು ಮಕ್ಕಳನ್ನು ನೋಡಿ ಹೇಗೆ ಅವರ ಮನೆ ಭಾಷೆ ಮತ್ತು ಕನ್ನಡದ ನಡುವಿರುವ ಭಾಷೆಯ ಕಂದಕವನ್ನು ಸರಿಪಡಿಸುವುದು ಎಂದು ಅನಿಸುತ್ತದೆ.

ತರಗತಿಯಲ್ಲಿ ಪಠ್ಯಪುಸ್ತಕ ಮತ್ತು ಇತರ ಓದುವ ಸಾಮಗ್ರಿಗಳಿದ್ದರೂ ಎರಡು ಪ್ರಶ್ನೆಗಳು ನನ್ನನ್ನು ಬಾಧಿಸುತ್ತವೆ. ಒಂದು, ನಾನು ಈ ಮಕ್ಕಳಿಗೆ ಓದುವುದನ್ನು ಕಲಿಸುವುದು ಹೇಗೆ, ಎರಡು, ಯಾವ ವಿಧಾನ ಉತ್ತಮವಾದುದು? ಇಂಗ್ಲೀಷ್ ಕಲಿಸುವುದು, ಅದು ಇನ್ನೂ ಕಷ್ಟ. ಈ ಮಕ್ಕಳಿಗೆ ಇಂಗ್ಲಿಷ್ ಎಂಬುದು ಗೊತ್ತೇ ಇಲ್ಲ. ನಾನೇನು ಮಾಡಬೇಕು? ನನ್ನ ಪಾಠಯೋಜನೆಯನ್ನು ಹೇಗೆ

ತಯಾರಿಸಬೇಕು? ಮೊದಲು ಏನು ಕಲಿಸಲಿ– ಅಕ್ಷರ, ವರ್ಣಮಾಲೆ ಅಥವಾ ಪದಗಳು? ಎಲ್ಲಿಂದ ಶುರು ಮಾಡಲಿ? ನನಗೆ ಈ ವಿಷಯದಲ್ಲಿ ಯಾರಾದರೂ ಮಾರ್ಗದರ್ಶನ ಮಾಡುವವರಿದ್ದರೆ ಎಷ್ಟು ಚೆನ್ನಾಗಿತ್ತು? ನನ್ನ ತರಗತಿಯ ಮಕ್ಕಳೆಲ್ಲ ಒಟ್ಟಾಗಿ ಕೂಡಿ ಕಲಿಯುವುವಂತಾದರೆ....

ಇಲ್ಲಿ ಪ್ರಸ್ತುತಪಡಿಸಿರುವ ಅನುಭವವು ಟೀಚರ್ಸ್ ಜರ್ನಲ್ ನಲ್ಲಿ ಪ್ರಕಟವಾಗಿರುವ ಶಿಕ್ಷಕರೊಬ್ಬರ ಮನದಳಲು. ಅವರ ಹೆಸರು ವಾಸಂತಿ. ಇವರು ಬೋಧನೆಯಲ್ಲಿ ಬಹಳ ಆಸಕ್ತಿಯಿರುವ ಶಿಕ್ಷಕಿ. ತನ್ನ ತರಗತಿಯ ಪ್ರತಿಯೊಂದು ಮಗುವೂ ಕಲಿಯಬೇಕೆಂದು ಆಕೆ ಬಯಸುತ್ತಾರೆ. ವಾರಪೂರ್ತಿ ಮಕ್ಕಳ ಅವಶ್ಯಕತೆಗಳನ್ನು, ಅವರ ಇಷ್ಟಾನಿಷ್ಟಗಳನ್ನು ಅರ್ಥಮಾಡಿಕೊಳ್ಳಲು ಕಳೆದಿದ್ದಾರೆ. ಅವರು ಶಾಲೆಯಲ್ಲಿ ಕಳೆಯುವ ಸಮಯವನ್ನು ಮಕ್ಕಳಿಗೆ ಮತ್ತು ತಮಗೆ ಅರ್ಥಪೂರ್ಣವಾಗಿರುವಂತೆ ಮಾಡುವುದು ಹೇಗೆಂದು ಚಿಂತಿಸುತ್ತಿದ್ದಾರೆ. ಇದು ವಾಸಂತಿಯವರ ಒಬ್ಬರ ಸಮಸ್ಯೆಯಲ್ಲ. ಈ ರೀತಿಯ ಸನ್ನಿವೇಶವನ್ನು ದಿನನಿತ್ಯವೂ ಭಾರತದಾದ್ಯಂತ ಬಹುತೇಕ ಶಿಕ್ಷಕರು ಎದುರಿಸುತ್ತಿದ್ದಾರೆ. ತರಗತಿ ಪೂರ್ತಿ ತುಂಬಿರುವ ನಮ್ಮ ದೇಶದ ಅನೇಕ ಶಾಲೆಗಳಿಗೆ ಹೋಲಿಸುವಾಗ ವಾಸಂತಿಯವರ ತರಗತಿಯಲ್ಲಿ ಕೇವಲ 18 ಮಕ್ಕಳಿದ್ದಾರೆ ಎಂಬುದೇ ಸಮಾಧಾನಕರ ಸಂಗತಿ. ಹಾಗಾಗಿ, ತುಂಬಿದ ತರಗತಿಯೊಳಗೆ ವಿವಿಧ ಅಗತ್ಯ, ಸಾಮರ್ಥ್ಯಗಳಿರುವ ಮಕ್ಕಳಿರುವಾಗ ಈ ಪ್ರಶ್ನೆಗೆ ಉತ್ತರ ಹೇಳುವುದು ಮತ್ತಷ್ಟು ಜಟಿಲವಾಗುತ್ತದೆ.

ನಾವೀಗ ವಾಸಂತಿ ಕೇಳಿದ ಪ್ರಶ್ನೆಗೆ ಹಿಂದಿರುಗೋಣ– ನಾನೇನು ಪಾಠಮಾಡಬೇಕು ಮತ್ತು ಹೇಗೆ ಪಾಠ ಮಾಡಬೇಕು? ಈ ಸಂಕ್ಷಿಪ್ತ ಕೈಪಿಡಿಯಲ್ಲಿ ನಾವು ಸಮಗ್ರ ಅಥವಾ ಸಂತುಲಿತ ಸಾಕ್ಷರತಾ ಚೌಕಟ್ಟನ್ನು (ಫಿಟ್ಜೆರಾಲ್ಡ್ 1999) ಪರಿಚಯಿಸುತ್ತಿದ್ದೇವೆ ಮತ್ತು ಅದು ಈ ಪ್ರಶ್ನೆಗಳನ್ನು ಹೇಗೆ ನಿಭಾಯಿಸಬಹುದು ಎಂಬುದಕ್ಕೆ ಸೂಕ್ತ ಮಾಹಿತಿ ನೀಡಬಹುದು ಎಂದು ಆಶಿಸುತ್ತೇವೆ. ಈ ಚೌಕಟ್ಟು ಏನು ಮಾಡುತ್ತದೆ? ಸರಳವಾಗಿ ಹೇಳಬೇಕೆಂದರೆ ಇದು ಶಿಕ್ಷಕರ ಪ್ರಶ್ನೆಗಳಿಗೆ ಕೆಲವು ಉತ್ತರಗಳನ್ನು ಕೊಡುತ್ತದೆ:

- ಏನು ಪಾಠ ಮಾಡಬೇಕು?
- ಹೇಗೆ ಪಾಠ ಮಾಡಬೇಕು?
- ಯಾವುದರ ಜೊತೆಯಲ್ಲಿ ಪಾಠ ಮಾಡಬೇಕು?

ಉಳಿದ ಎಲ್ಲಾ ಚೌಕಟ್ಟುಗಳಂತೆ ಈ ಸಮಗ್ರ (ಸಂತುಲಿತ) ಸಾಕ್ಷರತಾ ಚೌಕಟ್ಟು ಪರಿಪೂರ್ಣವೇನಲ್ಲ; ಆದರೆ ತರಗತಿಯಲ್ಲಿ ಎಲ್ಲಿಂದ ಆರಂಭಿಸಬೇಕು ಎನ್ನುವುದಕ್ಕೆ ಒಂದಿಷ್ಟು ಉಪಯುಕ್ತ ವಿಚಾರಗಳನ್ನು ಒದಗಿಸುತ್ತದೆ.

ಈ ಪ್ರಾಯೋಗಿಕ ಕೈಪಿಡಿಯಲ್ಲಿ ಕೆಳಗಿನ ವಿಷಯಗಳಿವೆ:

- ಚೌಕಟ್ಟಿನಲ್ಲಿ ಅನುಸರಿಸಲಾದ ಮಾರ್ಗದ ಬಗೆಗೆ ಸಂಕ್ಷಿಪ್ತ ವಿವರಣೆ
- ನಿಗದಿತ ಕಲ್ಪನೆಗೆ ಸಂಬಂಧಪಟ್ಟಂತೆ ತಂತ್ರಗಳನ್ನು ಕುರಿತ ಸ್ವಲ್ಪ ಆಳವಾದ ವಿವರಣೆಗಳಿಗಾಗಿ ಆರಂಭಿಕ ಸಾಕ್ಷರತಾ ಕಾರ್ಯಕ್ರಮದಿಂದ ತಯಾರಿಸಲಾದ ಇತರ ಸಂಪನ್ಮೂಲಗಳು ಮತ್ತು ಕೈಪಿಡಿಗಳ ಬಗೆಗಿನ ಮಾಹಿತಿ.

ಆದರೂ ಇದು ಆರಂಭಿಕ ಭಾಷೆ ಮತ್ತು ಸಾಕ್ಷರತಾ ಉಪಕ್ರಮಕ್ಕೆ ಅನುಕೂಲವಾಗುವಂತೆ ಒಂದು ಸಮಗ್ರ ಮಾರ್ಗದರ್ಶನವನ್ನು ಒದಗಿಸುವುದಿಲ್ಲ. ನಿರ್ದಿಷ್ಟ ಭಾಷೆಗೆ ಸಂಬಂಧಿಸಿದ ಬೋಧನಾಕ್ರಮವನ್ನು ಕುರಿತು ಚರ್ಚಿಸುವುದು ಈ ಕೈಪಿಡಿಯ ವ್ಯಾಪ್ತಿಯ ಹೊರಗಿನದ್ದು (ಉದಾ: ಭಾರತೀಯ ಭಾಷೆಗಳ ಎದುರು ಇಂಗ್ಲೀಷ್ ಕಲಿಸುವುದು ಹೇಗೆ). ಅದರೊಂದಿಗೆ ತರಗತಿಗಳಲ್ಲಿರುವ ವಿವಿಧ ರೀತಿಯ ಕಲಿಕಾರ್ಥಿಗಳಿಗೆ

ಸಂಬಂಧಿಸಿದಂತೆ ಬೇರೆ ಬೇರೆ ರೀತಿಯ ಬೋಧನೆಗಳನ್ನು ಹೇಗೆ ಮಾಡುವುದು ಎಂಬ ರೀತಿಯ ಸವಾಲುಗಳಿಗೆ ಕೂಡಾ ಇದು ಶಿಕ್ಷಕರಿಗೆ ಸಹಾಯ ಮಾಡಲಾರದು.

## ಸಮಗ್ರ ಅಥವಾ ಸಂತುಲಿತ ಸಾಕ್ಷರತಾ ಚೌಕಟ್ಟು

ಆರಂಭಿಕ ಭಾಷೆ ಮತ್ತು ಸಾಕ್ಷರತಾ ತರಗತಿಗಳಲ್ಲಿ ಬೋಧಿಸುವುದು ಬಹಳ ಗಂಭೀರ ಚರ್ಚೆಗೊಳಗಾದ ಕ್ಷೇತ್ರವಾಗಿದೆ. ಚಿಕ್ಕಮಕ್ಕಳು ಓದಿ ಬರೆಯುವುದನ್ನು ಹೇಗೆ ಕಲಿಯುತ್ತಾರೆ? ನಾವು ಮೊದಲು ವರ್ಣಮಾಲೆಯನ್ನು ಅಥವಾ ಅಕ್ಷರವನ್ನು ಕಲಿಸಬೇಕೆ? ಆನಂತರ ಅಕ್ಷರಗಳನ್ನು ಸೇರಿಸಿ ಪದ ಮಾಡುವುದನ್ನೇ, ಪದಗಳಿಂದ ವಾಕ್ಯ ಮಾಡುವುದನ್ನೇ ಮತ್ತು ವಾಕ್ಯಗಳಿಂದ ಪ್ಯಾರಾಗ್ರಾಫ್ ಬರೆಯುವುದನ್ನೇ? ಅಥವಾ ಇದಕ್ಕಿಂತ ಬೇರೆ ಯಾವುದಾದರೂ ಉತ್ತಮ ವಿಧಾನವಿದೆಯೇ? ಮೊದಲ ವಿಧಾನ ಬಹುತೇಕ ನಾವೆಲ್ಲ ಓದಿ ಬರೆಯುವುದನ್ನು ಕಲಿತಂತೆ, "ತಳದಿಂದ-ಮೇಲಿನ" ಅಥವಾ "ಧ್ವನಿವಿಜ್ಞಾನ" ವಿಧಾನ. ಇಲ್ಲಿ ಸ್ಪಷ್ಟ ಮತ್ತು ನಿಯಮಾನುಕ್ರಮವಾಗಿ ಅಕ್ಷರ ಮತ್ತು ಅದರ ಶಬ್ದಗಳನ್ನು, ಸರಿಯಾದ ಕಾಗುಣಿತ ಮತ್ತು ಅವುಗಳ ಉಚ್ಚಾರಕ್ಕೆ ಒತ್ತು ನೀಡಿ ಕಲಿಸಲು ಕೇಂದ್ರೀಕರಿಸಲಾಗುತ್ತದೆ. ಹೀಗೆ ಮಾಡಿದರೆ ಮಕ್ಕಳು ಲಿಪಿಯನ್ನು ಓದಲು ಕಲಿಯುತ್ತಾರೆ ಮತ್ತು ಓದಿದ್ದನ್ನು ಸ್ವಯಂ ಅರ್ಥಮಾಡಿಕೊಳ್ಳುತ್ತಾರೆ ಎಂದು ನಂಬಲಾಗಿದೆ.

ಇದಕ್ಕೆ ವಿರುದ್ಧವಾಗಿ ಮತ್ತೊಂದು ವಿಧಾನ "ಮೇಲಿಂದ ಕೆಳಗೆ" ಅಥವಾ "ಸಮಗ್ರ ಭಾಷಾ" ವಿಧಾನ. ಈ ಸಮಗ್ರ ಭಾಷಾ ಬೋಧನಾ ವಿಧಾನವು ಅರ್ಥವಿಲ್ಲದ ಧ್ವನಿ-ಆಧಾರಿತ ಕಸರತ್ತನ್ನು ವಿರೋಧಿಸುತ್ತದೆ. ಅದರ ವಾದವೇನೆಂದರೆ, ಕೆಳಹಂತ ಕೌಶಲ್ಯಗಳ ಅರ್ಜನೆಗೆ ಇಷ್ಟು ಒತ್ತು ನೀಡಿದರೆ ಮೇಲಿನ ಹಂತದ ಸಾಮರ್ಥ್ಯಗಳು ಮುಂದೂಡಲ್ಪಡುತ್ತವೆ. ಮಕ್ಕಳು ಮೇಲಿನ ತರಗತಿಗಳಿಗೆ ಬರುವವರೆಗೆ ಈ ಕೌಶಲಗಳನ್ನು ಗಳಿಸಿಕೊಳ್ಳಲು ಕಾಯಬೇಕಾಗುತ್ತದೆ. ಈ ಸಮಗ್ರ ಭಾಷಾ ಬೋಧನೆಯನ್ನು ಬೆಂಬಲಿಸುವ ಸಂಶೋಧಕರು ಮಕ್ಕಳು ಮಾತನಾಡುವುದನ್ನು ಕಲಿತಂತೆ ಸಹಜವಾಗಿಯೇ ಓದಿ ಬರೆಯುವುದನ್ನು ಕಲಿಯುತ್ತಾರೆ ಎನ್ನುತ್ತಾರೆ (ಗುಡ್‌ಮನ್ 1967). ಆದ್ದರಿಂದ, ಶಿಕ್ಷಕರು ಮಕ್ಕಳಿಗೆ ಹೆಚ್ಚು ಹೆಚ್ಚು ಮುದ್ರಿತ ಪಠ್ಯಗಳನ್ನು, ಸಾಕ್ಷರ ಪರಿಸರವನ್ನು ಮತ್ತು ಓದಿ ಬರೆಯಲು ರಾಶಿರಾಶಿ ಅವಕಾಶಗಳನ್ನು ಒದಗಿಸಬೇಕು. ಮಕ್ಕಳನ್ನು ಹೀಗೆ ಓದಿಗೆ ತೆರೆದುಕೊಳ್ಳುವಂತೆ ಮಾಡಲು ಸ್ವತಃ ಶಿಕ್ಷಕರು ತಾವು ಹೇಗೆ ಓದಿ ಬರೆಯುತ್ತೇವೆ ಎಂದು ಮಾದರಿಯಾಗಬೇಕು. ಈ ವಿಧಾನದಲ್ಲಿ ಅಕ್ಷರಗಳಿಂದ ಶುರುಮಾಡಬೇಕೆಂಬುದು ಮುಖ್ಯವಲ್ಲ. ಖಂಡಿತ ಅಕ್ಷರಗಳನ್ನು ಕಲಿಸಲೇಬೇಕು, ಆದರೆ ಯಾವುದೇ ನಿಗದಿತ ಕ್ರಮದಲ್ಲಿ ಅಲ್ಲ. ಮಕ್ಕಳನ್ನು ಅವರ ಆಲೋಚನೆಗಳನ್ನು ಇಷ್ಟಬಂದಂತೆ ಬರೆಯಲು, ಗೀಚಲು, ಚಿತ್ರಬಿಡಿಸಲು ತಮ್ಮದೇ ಕಾಗುಣಿತ ಸೃಷ್ಟಿಸಿಕೊಳ್ಳಲು ಬಿಡಬೇಕು. ಶಿಕ್ಷಕರು ಕೊಡುವ ಸೂಚನೆಗಳು ಮಕ್ಕಳಿಗೆ ಅರ್ಥಪೂರ್ಣವಾಗಿರಬೇಕು.

ಸಮಗ್ರ ಭಾಷಾ ವಿಧಾನದ ಸೈದ್ಧಾಂತಿಕರು ಪ್ರಸ್ತುತ ಪಡಿಸಿರುವ ವಾದವನ್ನು ಯಾರು ವಿರೋಧಿಸುತ್ತಾರೆ? ನಾವೆಲ್ಲರೂ ಮಕ್ಕಳು ಬೋಧಿಸಲ್ಪಟ್ಟ ವಿಚಾರಗಳನ್ನು ಅರ್ಥಮಾಡಿಕೊಳ್ಳಲೆಂದು, ಅವರಿಗೆ ವೈವಿಧ್ಯಮಯ ಓದುವ-ಬರೆಯುವ ಅವಕಾಶ ನೀಡಲು, ಪರಿಚಯಿಸಲು ಬಯಸುತ್ತೇವೆ. ಅವರು ಉತ್ತಮ ಅಭ್ಯಾಸ ಬೆಳೆಸಿಕೊಳ್ಳಲು ಮಾದರಿಯಾಗಲು ಬಯಸುತ್ತೇವೆ ಮತ್ತು ಅವರು ತಾವೇ ಸ್ವತಃ ಓದಿ-ಬರೆಯುವ ಪ್ರಯೋಗ ನಡೆಸಲೆಂದು ಆಶಿಸುತ್ತೇವೆ. ಈ ಸಮಗ್ರ ಭಾಷಾ ವಿಧಾನವನ್ನು ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ 1980 – 1990 ರ ದಶಕದಲ್ಲಿ ದೇಶದಾದ್ಯಂತ ಶಾಲೆಯೊಳಗೆ ಆದ್ಯ ತಾತ್ವಿಕ ಮಾರ್ಗದರ್ಶಿ ಬೋಧನೆಯಾಗಿ ಬಳಸಲಾಯಿತು. 20 ವರ್ಷಗಳ ನಂತರ ಈ ವಿಧಾನದ ಅಧ್ಯಯನ ನಡೆಸಿದ ಸಂಶೋಧಕರೆಲ್ಲರೂ ಒಂದು ತೀರ್ಮಾನಕ್ಕೆ ಬಂದಿದ್ದಾರೆ (ನೋಡಿ: ರಾಷ್ಟ್ರೀಯ ಸಂಶೋಧನಾ ಸಮಿತಿ,

1998): ಈ ಸಮಗ್ರ ಭಾಷಾ ಬೋಧನಾ ವಿಧಾನದಿಂದ ಅನೇಕ ಮಕ್ಕಳು ಲಾಭ ಪಡೆದಿದ್ದಾರೆ, *ಆದರೆ ಅವರಿಗೆ ಕೂಡ ಅಕ್ಷರ- ಧ್ವನಿ ಸಂಬಂಧಗಳನ್ನು ಕಲಿಯಲು ಸ್ಪಷ್ಟ ಮತ್ತು ಕ್ರಮಾನುಗತ ವಿಧಾನದ ಅಗತ್ಯವಿದೆ!*

ಇದರಿಂದ ತಿಳಿದು ಬರುವುದೇನೆಂದರೆ, “ತಳದಿಂದ” ಅಥವಾ “ಮೇಲಿಂದ” ಯಾವ ವಿಧಾನವಾದರೂ ಅವುಗಳಿಂದ ಲಾಭವಿರುವಂತೆ, ಮಿತಿಯೂ ಇದೆ; ಇದರಲ್ಲಿ ಯಾವುದೂ ಪರಿಪೂರ್ಣವಲ್ಲ ಎಂಬುದು ತಿಳಿಯುತ್ತದೆ. ಈ ಅರಿವು ನಮ್ಮನ್ನು “ಸಂತುಲಿತ” ಅಥವಾ ಸಮಗ್ರ ಆರಂಭಿಕ ಭಾಷೆ ಮತ್ತು ಸಾಕ್ಷರತಾ ತರಗತಿಯ ಒಂದು ಕಲ್ಪನೆಯತ್ತ ಎಳೆದು ತಂದಿದೆ.

“ಸಂತುಲಿತ” ಎಂಬುದನ್ನು ಮತ್ತಷ್ಟು ವಿವರಿಸುವ ಮೊದಲು ನಮ್ಮನ್ನು ನಾವು ಕೇಳಿಕೊಳ್ಳೋಣ: ಆರಂಭಿಕ ಭಾಷೆ ಮತ್ತು ಸಾಕ್ಷರತಾ ತರಗತಿಯ ಪ್ರಮುಖ ಗುರಿಗಳೇನು? ನೀವು ಈ ಕೈಪಿಡಿಯ ಆರಂಭದಲ್ಲಿ ಓದಿದ ವಾಸಂತಿ ತರಹದ ಶಿಕ್ಷಕಿಯು ಈ ಪ್ರಶ್ನೆಗೆ ಹೇಗೆ ಉತ್ತರಿಸಬಹುದು? ನಮ್ಮ ಅಭಿಪ್ರಾಯದಲ್ಲಿ, ಆರಂಭಿಕ ಭಾಷೆ ಮತ್ತು ಸಾಕ್ಷರತಾ ತರಗತಿಯ ಪ್ರಮುಖ ಗುರಿಯೇನೆಂದರೆ, ಮಕ್ಕಳು ಉತ್ಸಾಹಭರಿತರೂ, ಆಸಕ್ತಿಯಿಂದ ತೊಡಗಿಕೊಳ್ಳುವವರೂ ಮತ್ತು ಜೀವನಪೂರ್ತಿ ಉತ್ತಮ ಓದುಗರೂ ಬರಹಗಾರರೂ ಆಗುವಂತೆ ಕೌಶಲಗಳನ್ನು ಗಳಿಸಿಕೊಳ್ಳಲು ಅವರಿಗೆ ಸಹಾಯ ಮಾಡುವುದು. ಮಕ್ಕಳು ಸ್ವತಃ ನಿರರ್ಗಗಳವಾಗಿ ಪಠ್ಯವನ್ನು ಓದುವ ಸಾಮರ್ಥ್ಯವನ್ನು, ಅಂದರೆ ಓದಿದ್ದರ ಅರ್ಥವೇನೆಂದು ತಿಳಿದುಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲಿ ಎಂದು ಬಯಸುತ್ತೇವೆ. ಅವರು ಏನು ಓದುತ್ತಾರೋ ಅದರ ತಿರುಳನ್ನು ಅರ್ಥಮಾಡಿಕೊಳ್ಳಲಿ, ಇಷ್ಟಬಂದ ಪುಸ್ತಕವನ್ನು ಆಯ್ದುಕೊಂಡು ಓದುವ ಸಾಮರ್ಥ್ಯ ಬೆಳೆಸಿಕೊಳ್ಳಲಿ, ವೈವಿಧ್ಯಮಯ ಸಾಹಿತ್ಯವನ್ನು ಓದುವ ಕೌಶಲ ಕಲಿಯಲಿ, ಜೀವನದ ಅನೇಕ ಉದ್ದೇಶಗಳನ್ನು ಪೂರೈಸುವಂಥ ವಿವಿಧ ಬರಹಗಳನ್ನು, ಕಲಿಯುವಿಕೆಯನ್ನು ಒಳಗೊಂಡಂಥವುಗಳನ್ನು ಓದಲೆಂದು ನಾವು ಆಶಿಸುತ್ತೇವೆ. ಅವರು ಪಠ್ಯಗಳನ್ನು ವಿಮರ್ಶಾತ್ಮಕವಾಗಿ ಓದಬೇಕು ಮತ್ತು ಓದಿದ್ದನ್ನು ಪ್ರಶ್ನಿಸುವ, ಉತ್ತರ ಹುಡುಕುವ ಮತ್ತು ಓದಿದ ಪಠ್ಯಗಳ ಬಗ್ಗೆ ನಿರಂತರವಾಗಿ ಆಲೋಚಿಸುವಂತಹ ಸಾಮರ್ಥ್ಯ ಗಳಿಸಿಕೊಳ್ಳಬೇಕು. ಅವರು ತಾವು ಓದಿದ ಪುಸ್ತಕಗಳಿಗೆ ಕಲಾತ್ಮಕ ಸೌಂದರ್ಯದ ದೃಷ್ಟಿಯಿಂದ ಅಥವಾ ಭಾವಾನಾತ್ಮಕವಾಗಿ ಸ್ಪಂದಿಸಲಿ ಎಂದು ಬಯಸುತ್ತೇವೆ, ಪುಸ್ತಕದ ಯಾವ ಭಾಗ ಅವರಿಗೆ ಇಷ್ಟವಾಯಿತು, ಯಾವ ಭಾಗ ಇಷ್ಟವಾಗಲಿಲ್ಲ, ಏಕೆ ಎಂಬುದು ಮುಖ್ಯ? ಅವರು ವಿವಿಧ ಬಗೆಯ ಓದುಗರಿಗೆ ತಕ್ಕಂತೆ, ಉದ್ದೇಶಕ್ಕೆ ತಕ್ಕಂತೆ ಸರಳವಾಗಿ ಬರೆಯುವುದನ್ನು ಕಲಿಯಲಿ. ಈ ಎಲ್ಲಾ ಗುರಿಗಳನ್ನು, ಕೌಶಲಗಳನ್ನು ಸಂಪಾದಿಸಲು ನಾವು ಅವರಿಗೆ ಶಾಲಾ ಆರಂಭದ ವರ್ಷಗಳಲ್ಲಿ ಭದ್ರ ಬುನಾದಿ ಹಾಕಲು ಬಯಸುತ್ತೇವೆ. ಮೂರನೇ ತರಗತಿಯ ಹೊತ್ತಿಗೆ ಅವರು ಅವರ ದಾರಿಯಲ್ಲಿ ಮುಂದೆ ಸಾಗಿರಬೇಕು!

ಎಳೆಯ ಓದುಗರಿಗೆ, ಬರಹಗಾರರಿಗೆ ಎಂತಹ ಮಹತ್ವಾಕಾಂಕ್ಷೆಯ ಗುರಿಗಳು! ವಾಸಂತಿ ತರಹದ ಒಬ್ಬ ಶಿಕ್ಷಕಿಯು ಶಾಲಾ ಆರಂಭದ ಕೆಲವೇ ವರ್ಷಗಳಲ್ಲಿ ಈ ಎಲ್ಲವನ್ನೂ, ಇದೆಲ್ಲವನ್ನೂ ಸಾಧಿಸುವ ಕನಸು ಕಾಣಲು ತಾನೇ ಹೇಗೆ ಸಾಧ್ಯ? ಇದು ಸಾಧ್ಯವಾಗಬಹುದಾದ ಕಾರ್ಯವೇ? ಅಥವಾ, ನಾವು ನಮಗೆಲ್ಲ ಗೊತ್ತಿರುವಂತೆ ಅಕ್ಷರ, ಪದ, ವಾಕ್ಯ, ವಾಕ್ಯವೃಂದಗಳನ್ನು ಕಲಿಸಲು ಅಂಟಿಕೊಳ್ಳೋಣವೇ? ಉಕ್ತಲೇಕನ ಬರೆಸುತ್ತಾ, ಕಾಗುಣಿತಗಳನ್ನು ತಿದ್ದುತ್ತಾ ಮಕ್ಕಳ ಕೈ ಬರಹ ಸುಂದರವೂ ಸುಸ್ಥಿರವೂ ಆಗಿರುವಂತೆ ನೋಡಿಕೊಂಡರೆ ಸಾಕಾ? ಈಗ, ಇಲ್ಲಿ “ಸಂತುಲಿತ” ಅಥವಾ ಸಮಗ್ರ ಸಾಕ್ಷರತಾ ಬೋಧನಾ ವಿಧಾನವು ಸಹಾಯ ಮಾಡುತ್ತದೆ, ನಿಗದಿತ ಸಮಯದೊಳಗೆ ಸಾಕಷ್ಟು ಕಲಿಸಲು ಪ್ರಯತ್ನಿಸುತ್ತದೆ.

ಇಲ್ಲಿ ಒಂದು ಫ್ಲೋ ಚಾರ್ಟ್ ಬರಬೇಕು

**ಚಿತ್ರ 1: ಈ ಚಿತ್ರವು ಸಮಗ್ರ ಸಾಕ್ಷರತಾ ಚೌಕಟ್ಟಿನ ಮುಖ್ಯ ಅಂಶಗಳನ್ನು ವಿಶದಪಡಿಸುತ್ತದೆ.**

**ಕೆಂಪುಬಣ್ಣ–ಅರ್ಥಗ್ರಹಿಕೆ, ಕೇಸರಿಬಣ್ಣ–ನಿರರ್ಗಳತೆ, ಹಳದಿ–ಶಬ್ದಸಂಪತ್ತು, ತಿಳಿಹಸಿರು–ಧ್ವನಿವಿಜ್ಞಾನ, ತಿಳಿನೀಲಿ–ಧ್ವನಿಮಾ ಅರಿವು**

**ಗಟ್ಟಿಯಾಗಿ ಓದುವುದು, ಮಾದರಿ ಬರವಣಿಗೆ, ಜೊತೆಗೂಡಿ ಬರೆಯುವುದು, ಮಾರ್ಗದರ್ಶಿತ ಬರಹ, ಸ್ವತಂತ್ರ ಬರವಣಿಗೆ, ಸ್ವತಂತ್ರ ಓದು, ಮಾರ್ಗದರ್ಶಿತ ಓದು, ಜೊತೆಗೂಡಿ ಓದುವುದು**

ಚಿತ್ರ 1 ಪಾಶ್ಚಾತ್ಯ ದೇಶಗಳ ಸಂದರ್ಭದಲ್ಲಿ ಸಾಮಾನ್ಯವಾಗಿ ಕಂಡುಬರುವ ಅರ್ಥಪೂರ್ಣ ಸಾಕ್ಷರತಾ ಚೌಕಟ್ಟಿನ ಒಂದು ಪಕ್ಷಿನೋಟವನ್ನು ನೀಡುತ್ತದೆ. ಒಳಗಿನ ಘನೀಕೃತ ವೃತ್ತಗಳು "ನಾವೇನು ಕಲಿಸಬೇಕು?" ಎಂಬ ಪ್ರಶ್ನೆಗೆ ಉತ್ತರ ನೀಡುತ್ತವೆ. ಈ ವೃತ್ತಗಳು ಓದಿ ಬರೆಯಲು ಬೇಕಾದ, ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಸಂಶೋಧಕರು ಗುರುತಿಸಿರುವ ಐದು ಅಂಶಗಳನ್ನು ಪ್ರತಿನಿಧಿಸುತ್ತವೆ: *ಧ್ವನಿಮಾ ಅರಿವು, ಧ್ವನಿವಿಜ್ಞಾನ, ನಿರರ್ಗಳತೆ, ಶಬ್ದಸಂಪತ್ತು* ಮತ್ತು *ಅರ್ಥಗ್ರಹಿಕೆ.* ಹೊರಗಿನ ವೃತ್ತವು "ನಾವು ಹೇಗೆ ಕಲಿಸಬೇಕು?" ಎಂಬ ಪ್ರಶ್ನೆಗೆ ಉತ್ತರ ನೀಡುತ್ತದೆ. ಅದು ಓದಲು ಬರೆಯಲು ಕಲಿಸಬಹುದಾದ ವಿವಿಧ ವಿಧಾನಗಳನ್ನು ಪ್ರತಿನಿಧಿಸುತ್ತದೆ: *ಗಟ್ಟಿಯಾಗಿ ಓದುವುದು, ಮಾದರಿ ಬರವಣಿಗೆ, ಜೊತೆಗೂಡಿ ಬರೆಯುವುದು, ಮಾರ್ಗದರ್ಶಿತ ಬರಹ, ಸ್ವತಂತ್ರ ಬರವಣಿಗೆ, ಸ್ವತಂತ್ರ ಓದು, ಮಾರ್ಗದರ್ಶಿತ ಓದು, ಜೊತೆಗೂಡಿ ಓದುವುದು.* ನಾವು ಮುಂದಿನ ಭಾಗಗಳಲ್ಲಿ ಪ್ರತಿಯೊಂದನ್ನು ವಿವರಿಸುತ್ತೇವೆ (ಅ) ಏನನ್ನು ಕಲಿಸಬೇಕು; (ಬ) ಹೇಗೆ ಕಲಿಸಬೇಕು ಮತ್ತು ಅದರ ಜೊತೆಗೆ ಮೂರನೆಯ ಪ್ರಶ್ನೆಗೂ ಉತ್ತರ ನೀಡುತ್ತೇವೆ, (ಕ) ಯಾವುದರ ಜೊತೆಗೆ ಕಲಿಸಬೇಕು.

**(ಅ) ಏನನ್ನು ಕಲಿಸಬೇಕು?**

ಆರಂಭಿಕ ಭಾಷೆ ಮತ್ತು ಸಾಕ್ಷರತಾ ತರಗತಿಯಲ್ಲಿ ನಾವು ಏನನ್ನು ಕಲಿಸಬೇಕು? ಚಿತ್ರ 1, ನಾವು ಗಮನಿಸಲೇಬೇಕಾಗಿರುವ ಬಹು ಗುರುತರವಾದ ಐದು ಅಂಶಗಳನ್ನು ತೋರಿಸಿದೆ. ಪ್ರತಿಯೊಂದನ್ನು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸಲಾಗಿದೆ.

1. **ಅರ್ಥಗ್ರಹಿಕೆ:** ಸಮಗ್ರ ಸಾಕ್ಷರತಾ ಮಾದರಿಯ ಕೇಂದ್ರ ಭಾಗವೇ ಈ ಅರ್ಥಗ್ರಹಿಕೆಯಾಗಿದೆ. ಮಗುವು ತಾನು ಓದಿದ ಪಠ್ಯವನ್ನು ಅರ್ಥಮಾಡಿಕೊಂಡು, ಅದನ್ನು ಸಮರ್ಥಿಸುವ, ವ್ಯತ್ಯಾಸ ಗುರುತಿಸುವ, ವಿವರಿಸುವ, ವಿಸ್ತರಿಸುವ, ಸಾಧಾರಣೀಕರಿಸುವ, ಉದಾಹರಣೆ ಕೊಡುವ, ಊಹಿಸುವ, ಸಿದ್ಧಾಂತಗಳನ್ನು ತಯಾರಿಸುವ, ಪುನಃ ಬರೆಯುವ ಮತ್ತು ಸಾರಾಂಶ ಬರೆಯುವ ಸಾಮರ್ಥ್ಯ ಗಳಿಸಿಕೊಳ್ಳುವುದು. ಮಕ್ಕಳು ಓದಿದ ಪಠ್ಯವನ್ನು ಅರ್ಥಮಾಡಿಕೊಳ್ಳಬೇಕು ಅಥವಾ ಬರೆದ ಬರಹದಲ್ಲಿ ಅರ್ಥವಿರಬೇಕೆಂದು ಶಿಕ್ಷಕರು ಅವರಿಗೆ ಕಲಿಸಿಕೊಡಬೇಕಾಗುತ್ತದೆ, ಅದೇ ಮೂಲ ತಿರುಳು, ಅದಕ್ಕೆ ಗಮನ ನೀಡಲೇಬೇಕಾದ ಅವಶ್ಯಕತೆಯಿದೆ.
2. **ಶಬ್ದಸಂಪತ್ತು:** ಮಕ್ಕಳು ಅರ್ಥಮಾಡಿಕೊಂಡು ಮಾತನಾಡಲು, ಓದಿ, ಬರೆಯಲು ವೈವಿಧ್ಯಮಯ ಪದಗಳನ್ನು ತಿಳಿದಿರಬೇಕಾಗುತ್ತದೆ. ಇದು ಕೇವಲ ಪದಗಳ ಅರ್ಥವನ್ನು "ಉರುಹೊಡೆಯುವುದಲ್ಲ". ಪದಗಳನ್ನು ಸರಿಯಾದ ಕ್ರಮದಲ್ಲಿ ಕಲಿಸಿದರೆ ಮಕ್ಕಳು ಹೊಸ ಪದಗಳನ್ನು ತಮ್ಮ ಮಾತಿನಲ್ಲಿ ಮತ್ತು ಬರಹದಲ್ಲಿ ಬಳಸುತ್ತಾರೆ.
3. **ನಿರರ್ಗಳತೆ:** ನಿರರ್ಗಳತೆ ಎಂದರೆ ಮಾತನಾಡುವಾಗ, ಓದುವಾಗ ಯಾವುದೇ ಅಡೆತಡೆಯಿಲ್ಲದೆ ಸ್ಪಷ್ಟವಾದ ಉಚ್ಚಾರದೊಂದಿಗೆ ಅಭಿವ್ಯಕ್ತಿಸುವುದು. ನಮ್ಮ ಶಾಲೆಯಲ್ಲಿರುವ ಅನೇಕ ಮಕ್ಕಳು

ಅಕ್ಷರಗಳನ್ನು ಗುರುತಿಸುತ್ತಾರೆ. ಆದರೆ ಒಂದೊಂದೇ ಪದವನ್ನು ಕಷ್ಟಪಟ್ಟು ಓದುತ್ತಾರೆ. ಹೀಗೆ ನಿಧಾನಕ್ಕೆ ಓದುವುದರಿಂದ ಏನು ಓದುತ್ತಾರೋ ಅದನ್ನು ಅರ್ಥಮಾಡಿಕೊಳ್ಳಲು ಮಕ್ಕಳು ಕಷ್ಟಪಡುತ್ತಾರೆ. ಕಷ್ಟಪಡದೆ ಓದಿದರೆ, ಬರೆದರೆ ಅದನ್ನು ಅರ್ಥಮಾಡಿಕೊಳ್ಳಲು ಅವರು ಸಮರ್ಥರಾಗುತ್ತಾರೆ. ಆರಂಭಿಕ ಕಲಿಕಾ ಹಂತದಲ್ಲಿ ನಿರರ್ಗಳತೆಯನ್ನು ತರುವುದೇ ಬಹು ಮುಖ್ಯ ಗುರಿಯಾಗಿದೆ.

4. **ಧ್ವನಿವಿಜ್ಞಾನ:** ಇದು ಅಕ್ಷರ ಮತ್ತು ಅವುಗಳ ಉಚ್ಚರಿತ ಶಬ್ದಗಳನ್ನು ಗುರುತಿಸುವುದಕ್ಕೆ ಸಂಬಂಧಿಸಿದೆ. ಮೊದಲಿನ ಭಾಗದಲ್ಲಿ ವಿವರಿಸಿದಂತೆ, ಮಕ್ಕಳಿಗೆ ಶಿಸ್ತುಬದ್ಧವಾಗಿ, ವ್ಯವಸ್ಥಿತವಾಗಿ ಧ್ವನಿವಿಜ್ಞಾನವನ್ನು ಕಲಿಸುವ ಅವಶ್ಯಕತೆಯಿದೆ. ಓದುವುದು ಬರೆಯುವುದು ಮಾತನಾಡಿದಂತೆ ಅಲ್ಲ– ಅದು ತನಗೆ ತಾನೇ ನೈಸರ್ಗಿಕವಾಗಿ ಅಥವಾ ಅದರಲ್ಲಿ ವಿಲೀನವಾಗುವುದರಿಂದ ಮತ್ತು ಮಾದರಿಯ ಮೂಲಕ ಬರುವುದಿಲ್ಲ. ನಾವು ಮಕ್ಕಳಿಗೆ ಅಕ್ಷರ–ಧ್ವನಿಗಿರುವ ಸಂಬಂಧವನ್ನು ಸ್ಪಷ್ಟವಾಗಿ ಕಲಿಸಲೇಬೇಕು ವರ್ಷಗಳ ಕಾಲ ಅದನ್ನು ವಿಸ್ತರಿಸಬೇಕು. ಮೆನನ್ ಮತ್ತು ಇತರರು (2017) ಹೇಳುವಂತೆ, ಭಾರತೀಯ ಭಾಷೆಯಲ್ಲಿರುವ ಎಲ್ಲಾ ಅಕ್ಷರಗಳನ್ನು/ಲಿಪಿಗಳನ್ನು ಕಲಿಯಲು ಮಕ್ಕಳಿಗೆ ಕೆಲವು ವರ್ಷಗಳೇ ಬೇಕಾಗುತ್ತವೆ, ಹಾಗೆಯೇ ಇಂಗ್ಲೀಷ್‌ನಲ್ಲಿ ಅಲ್ಲಿಯ ಕಾಗುಣಿತಗಳ ವಿನ್ಯಾಸವನ್ನು ಕಲಿಯಲು ಕೆಲವು ವರ್ಷಗಳು ಬೇಕಾಗುತ್ತವೆ.
5. **ಧ್ವನಿಮಾ ಅರಿವು[1]:** ಇದು ಮಾತನಾಡುವ ಭಾಷೆಯಲ್ಲಿರುವ ಶಬ್ದಗಳನ್ನು ಗಮನಿಸುವುದು, ಅವುಗಳ ಬಗ್ಗೆ ಆಲೋಚಿಸುವುದು ಮತ್ತು ಅವುಗಳನ್ನು ಬಳಸುವ ಸಾಮರ್ಥ್ಯವಾಗಿದೆ. ಪ್ರಾಸಗಳನ್ನು ಕೇಳುವ ಸಾಮರ್ಥ್ಯ, ವಾಕ್ಯಗಳಲ್ಲಿರುವ ಪದಗಳ ವ್ಯತ್ಯಾಸ ತಿಳಿಯುವ ಸಾಮರ್ಥ್ಯ, ಪದಗಳೊಳಗಿರುವ ಅಕ್ಷರ/ಉಚ್ಚರಾಂಶಗಳನ್ನು ಗುರುತಿಸುವ ಸಾಮರ್ಥ್ಯವನ್ನೊಳಗೊಂಡಿದೆ. ಮಕ್ಕಳು ಈ ಶಬ್ದಗಳನ್ನು ಕೇಳಿಸಿಕೊಳ್ಳುವುದು ಮುಖ್ಯ ಏಕೆ? ಏಕೆಂದರೆ, ನಾವು ಓದುವ, ಬರೆಯುವ ಪಠ್ಯವು ಶಬ್ದಗಳಿಂದಾಗಿದೆ! ಒಂದು ಮಗುವು ಎರಡು ಪದಗಳನ್ನು ಕೇಳಿದಾಗ ಉದಾಹರಣೆಗೆ, "ಬಳೆ" ಮತ್ತು "ಬಣ್ಣ" ಎಂಬ ಎರಡೂ ಪದಗಳು 'ಬ' ಶಬ್ದದಿಂದ ಆರಂಭವಾಗುತ್ತವೆ ಅಥವಾ "ರಜ" ಮತ್ತು "ಮಜ" ಎಂಬ ಪದಗಳು ಪ್ರಾಸ ಹೊಂದಿವೆ ಎಂದು ಅರ್ಥಮಾಡಿಕೊಳ್ಳಬೇಕು. ಶಬ್ದಗಳಲ್ಲಿರುವ ಸಾದೃಶ್ಯತೆ ಮತ್ತು ವೈದೃಶ್ಯತೆಗಳನ್ನು ಗಮನಿಸಬೇಕು. ಅವುಗಳನ್ನು ಕೂಡಿಸುವುದು (ಬೆರೆಸಿ) ಅಥವಾ ವಿಭಜಿಸುವುದು (ಪ್ರತ್ಯೇಕಿಸಿ) – ಇವೆಲ್ಲವೂ ಮಕ್ಕಳು ಚೆನ್ನಾಗಿ ಮಾತನಾಡಲು, ಓದಲು, ಬರೆಯಲು ಸಹಾಯ ಮಾಡುತ್ತವೆ.

ಹಾಗಾದರೆ, ಮಕ್ಕಳು ಓದಲು ಬರೆಯಲು ಈ ಐದು ಅಂಶಗಳನ್ನು ಕಲಿತರೆ ಸಾಕೇ? ಖಂಡಿತವಾಗಿ ಸಾಕಾಗುವುದಿಲ್ಲ! ಈ ಐದು ಅಂಶಗಳ ಜೊತೆಗೆ ನಾವು ಈ ಕೆಳಗೆ ವಿವರಿಸಿರುವ ಮತ್ತಷ್ಟು ಅಂಶಗಳನ್ನು ಶಿಫಾರಸ್ಸು ಮಾಡುತ್ತೇವೆ. ಅವುಗಳನ್ನು ಕಲಿಯುವಂತೆ ಮಕ್ಕಳಿಗೆ ನಾವು ಸಹಾಯ ಮಾಡಬೇಕು.

6. **ಮೌಖಿಕ ಭಾಷೆಯ ಬೆಳವಣಿಗೆ:** ಮಕ್ಕಳು ತಮ್ಮ ಮನೆಯ ಭಾಷೆಗಳನ್ನು ಮಾತನಾಡುವುದನ್ನು ಚೆನ್ನಾಗಿ ಕಲಿತು ಶಾಲೆಗೆ ಬರುತ್ತಾರೆ. ಹಾಗಿದ್ದರೂ, ಕೆಲವು ಮಕ್ಕಳ ಮತ್ತು ಶಾಲೆಯ ಭಾಷೆ ಬೇರೆಬೇರೆಯಾಗಿರುತ್ತದೆ, ಅವರು ಹೊಸ ಭಾಷೆಯನ್ನು ಶಾಲೆಯಲ್ಲಿ ಕಲಿಯಬೇಕು! ಕೆಲವು ಮಕ್ಕಳಿಗೆ ಮನೆಯ ಭಾಷೆಯೇ ಶಾಲೆಯ ಭಾಷೆಯಾಗಿದ್ದರೂ, ಅವರೂ ಉತ್ತಮ ಅರ್ಥಗ್ರಹಿಕೆಯನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಮೌಖಿಕ ಭಾಷೆಯ ಬೆಳವಣಿಗೆಯನ್ನು ಪೋಷಿಸುವುದೇ ಆರಂಭಿಕ ಶಾಲಾ ವರ್ಷಗಳ ಮುಖ್ಯ ಕಾರ್ಯಕ್ರಮವಾಗಿದೆ.
7. **ಸಾಹಿತ್ಯಕ ಜ್ಞಾನ:** ಮಕ್ಕಳಿಗೆ ಉತ್ತಮ ಸಾಹಿತ್ಯವನ್ನು ಆಸ್ವಾದಿಸುವ ಮತ್ತು ಅದಕ್ಕೆ ಅನೌಪಚಾರಿಕ ರೀತಿಯಲ್ಲಿ ಸ್ಪಂದಿಸುವ ಸಾಮರ್ಥ್ಯವಿರಬೇಕು. ತುಂಬಾ ಚಿಕ್ಕ ಮಕ್ಕಳೂ ಕೂಡ ಸಾಹಿತ್ಯವನ್ನು

ಆನಂದಿಸುವುದನ್ನು ಕಲಿಯಬೇಕು, ಉತ್ತಮ ಕತೆಗಳನ್ನು ಅರ್ಥಮಾಡಿಕೊಳ್ಳಬೇಕು, ಅವರಿಗಾಗಿ ಓದಲ್ಪಟ್ಟ ಕತೆ, ಹಾಡು, ಇನ್ನಿತರ ಪಠ್ಯಗಳನ್ನು ಆನಂದಿಸಬೇಕು.

8. **ವಿಮರ್ಶಾತ್ಮಕ ಓದು:** ಮಕ್ಕಳು ಕತೆಗಳನ್ನು ಓದಿ/ಕೇಳಿ "ಅರ್ಥಮಾಡಿಕೊಂಡರೆ" ಸಾಲದು. ಅವರು ಆ ಕತೆ/ಪಠ್ಯಕ್ಕೆ ಪ್ರತಿಕ್ರಿಯೆ ನೀಡಬೇಕು, ವಿಮರ್ಶಿಸಬೇಕು. ಇದನ್ನು ಬೆಳೆಸಲು ತುಂಬಾ ಸಮಯ ಬೇಕಾಗುತ್ತದೆ ಆದರೆ ಪಠ್ಯಗಳನ್ನು ಈ ರೀತಿಯಲ್ಲಿಯೂ ಅರ್ಥಮಾಡಿಕೊಳ್ಳಬೇಕು ಎಂಬುದಕ್ಕೆ ಎಳವೆಯಲ್ಲಿಯೇ ಬುನಾದಿ ಹಾಕಬೇಕು.
9. **ಅವರ ಬದುಕಿನಲ್ಲಿ ಓದು ಬರಹವನ್ನು ಬಳಸುವುದು:** ಮಕ್ಕಳಿಗೆ ಓದು ಬರಹವೆಂಬುದನ್ನು ಅವರ ದೈನಂದಿನ ಬದುಕಿನಲ್ಲಿ ಉಪಯೋಗಿಸುವುದು ಹೇಗೆಂದು ಕಲಿಸಬೇಕು. ಅದಕ್ಕಾಗಿ ಅವರು ತಮಗೆ ಬೇಕಾದ ಸಾಮಾನಿನ ಪಟ್ಟಿ ಬರೆಯುವುದು, ಪತ್ರ ಬರೆಯುವುದು, ಏನನ್ನಾದರೂ ಬರವಣಿಗೆಯ ಮೂಲಕ ವ್ಯಕ್ತಪಡಿಸುವುದು, ಹಾಗೆಯೇ ತಮ್ಮ ಬದುಕಿನ ಘಟನೆಗಳಿಗೆ ಓದುವುದು ಮತ್ತು ಬರೆಯುವುದರ ಮೂಲಕ ಪ್ರತಿಕ್ರಿಯಿಸಬೇಕು.

ಈ ಪಟ್ಟಿಯೇನೂ ಸಂಪೂರ್ಣವಲ್ಲ. ನೀವು ಇನ್ನೂ ಅನೇಕ "ಮಾಡಲೇ ಬೇಕಾದ" ಇತರ ಚಟುವಟಿಕೆಗಳನ್ನು ಆಲೋಚಿಸಬಲ್ಲಿರಿ. ದಯವಿಟ್ಟು, ನಿಮ್ಮ ಅನುಭವದಲ್ಲಿ, ಸನ್ನಿವೇಶದಲ್ಲಿ ಸೂಕ್ತವೆನಿಸುವ ಮಕ್ಕಳು ಮಾಡಬಹುದಾದ ಓದು ಬರಹದ ಚಟುವಟಿಕೆಗಳನ್ನು ಕಂಡುಕೊಳ್ಳಿ. ಇದು ಶಾಲೆಯ ಆರಂಭಿಕ ವರ್ಷಗಳಲ್ಲಿ ಸಾಕ್ಷರತೆಯನ್ನು ಸಾಧಿಸಬೇಕಾದಾಗ ಮಕ್ಕಳಿಗೆ ಯಾವ್ಯಾವ ಚಟುವಟಿಕೆಗಳಿಂದ ಶುರು ಮಾಡಬಹುದು ಎಂಬುದನ್ನು ಸೂಚಿಸುವುದಷ್ಟೇ ಆಗಿದೆ.

**(ಬ) ಹೇಗೆ ಕಲಿಸಬೇಕು?**

ಚಿತ್ರ 1 ರಲ್ಲಿ ಹೊರಗಿನ ವೃತ್ತಗಳು ಶಿಕ್ಷಕರು ಮಕ್ಕಳಿಗೆ ಓದು ಬರಹವನ್ನು ಕಲಿಸಬಹುದಾದ ಅನೇಕ ವಿಧಾನಗಳನ್ನು ಸೂಚಿಸುತ್ತವೆ. ನಾವೀಗ ಅವುಗಳನ್ನು ಸಂಕ್ಷಿಪ್ತವಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ.

**ಜೋರಾಗಿ ಓದುವುದು[2]:** ನಿಜವಾಗಿಯೂ ನಮ್ಮ ದೇಶದ ತರಗತಿಗಳಲ್ಲಿ ಶಿಕ್ಷಕರು ಪಠ್ಯಪುಸ್ತಕವನ್ನು ಜೋರಾಗಿ ಓದುತ್ತಾರೆ, ಅವರು ಓದಿದ ನಂತರ ವಿದ್ಯಾರ್ಥಿಗಳು ಅದನ್ನು ಪುನರುಚ್ಚರಿಸುತ್ತಾರೆ. ಇಲ್ಲಿ, ನಾವು ಸ್ವಲ್ಪ ಭಿನ್ನವಾದ ರೀತಿಯಲ್ಲಿ ಓದುವುದನ್ನು ಪರಿಚಯಿಸುತ್ತೇವೆ. ಈ ಸಮಗ್ರ ಸಾಕ್ಷರತಾ ಚೌಕಟ್ಟಿನಲ್ಲಿ ಜೋರಾಗಿ ಓದುವುದು ಅಕ್ಷರ ಪದಗಳನ್ನು ಓದಲು ಕಲಿಸಲು ಅಲ್ಲ. ಈ ಜೋರಾಗಿ ಓದುವ ತರಗತಿಗಳು ಮಕ್ಕಳಿಗೆ ಸಾಹಿತ್ಯವನ್ನು ಪರಿಚಯಿಸಲು, ಶಬ್ದಸಂಪತ್ತನ್ನು ಹೆಚ್ಚಿಸಲು, ಅರ್ಥೈಸಿಕೊಳ್ಳುವುದನ್ನು ಕಲಿಸಲು ಮತ್ತು ಭಾಷೆಯನ್ನು ಸೂಕ್ತರೀತಿಯಲ್ಲಿ ಬಳಸಲು ಕಲಿಸುವುದಾಗಿವೆ. ಈ ಜೋರಾಗಿ ಓದುವ ತರಗತಿಗಳು ಮಕ್ಕಳೊಳಗೆ ಒಂದು ಸಾಮುದಾಯಿಕ ಪ್ರಜ್ಞೆಯನ್ನು ಬಿಂಬಿಸುತ್ತವೆ. ಉದಾ: ವಾಸಂತಿ ತಮ್ಮ ತರಗತಿಯೊಳಗೆ ವಿವಿಧ ಭಾಷೆಯ[3] ಪುಸ್ತಕಗಳನ್ನು ತಂದು ಓದುವುದರ ಮೂಲಕ ಅವರ ತರಗತಿಯ ಮಕ್ಕಳೊಳಗೆ  ನಾವೆಲ್ಲ ಒಂದೆಂಬ ಸಾಮುದಾಯಿಕ ಪ್ರಜ್ಞೆಯನ್ನು, ನಾವೂ ಇಲ್ಲಿಗೆ ಸೇರಿದವರೇ ಎಂಬ ಭಾವನೆಯನ್ನೂ ಬೆಳೆಸಬಹುದು. ಅವರು ತುಂಬಾ ಸರಳವಾದ ಕನ್ನಡ ಕತೆ ಪುಸ್ತಕಗಳನ್ನು ಓದುವುದರ ಮೂಲಕ ಸೂರಜ್, ಬಿಂದಿಯಾರಿಗೆ ಭಾಷೆಯನ್ನು ಪರಿಚಯಿಸಬಹುದು.

ಇದನ್ನು ನಿಮ್ಮ ತರಗತಿಯಲ್ಲಿ ಅನುಸರಿಸುವ ಮೊದಲು, ಈ ವಿಚಾರ ನಿಮ್ಮ ಮನಸ್ಸಿನಲ್ಲಿರಲಿ:

1. "ಉತ್ತಮ" ಕತೆಯ ಪುಸ್ತಕವನ್ನು ಮಕ್ಕಳಿಗೆ ಓದುವುದರ ಮೂಲಕ ನೀವು ಶುರುಮಾಡಬಹುದು. ಪಠ್ಯಪುಸ್ತಕಗಳನ್ನು ತೆಗೆದುಕೊಳ್ಳಬಾರದು. ಮಕ್ಕಳ ಕತೆ ಪುಸ್ತಕವನ್ನು ಓದಿ, ಅದಕ್ಕಾಗಿ ಗ್ರಂಥಾಲಯದಲ್ಲಿ ಅಥವಾ ಶಾಲೆಯು ಆರಿಸಿದ ಉತ್ತಮ ಸಾಹಿತ್ಯಕ ಪುಸ್ತಕ ತೆಗೆದುಕೊಳ್ಳುವುದು[4].

ಉತ್ತಮ ಗುಣಮಟ್ಟದ ಪುಸ್ತಕ ಆರಿಸಲು ಎಷ್ಟು ಸಾಧ್ಯವೋ ಅಷ್ಟು ಪ್ರಯತ್ನಪಡುವುದು. ಅನೇಕ ಭಾರತೀಯ ಪ್ರಕಾಶಕರು ಮಕ್ಕಳಿಗಾಗಿ ಉತ್ತಮ ಸಾಹಿತ್ಯಕ ಪುಸ್ತಕಗಳನ್ನು ಹೊರತರುತ್ತಿದ್ದಾರೆ. ಎಲ್ಲಾ ರೀತಿಯ ಪುಸ್ತಕಗಳನ್ನು, ಕತೆ, ಹಾಡು, ಪರಿಚಯಾತ್ಮಕ, ಮಾಹಿತಿ ನೀಡುವ ಪುಸ್ತಕ ಹೀಗೆ... ಓದಬಹುದು.




ಚಿತ್ರ 2 ಮತ್ತು 3, ಜೋರಾಗಿ ಓದಿ ಹೇಳುವ ತರಗತಿಗಳನ್ನು ಹೊರ ಆವರಣದಲ್ಲಿ ನಡೆಸಬಹುದು. ದೊಡ್ಡ ಪುಸ್ತಕಗಳನ್ನೂ ಓದಬಹುದು.
ಚಿತ್ರ ಸೌಜನ್ಯ– ಪೂರ್ಣ ಲರ್ನಿಂಗ್ ಸೆಂಟರ್, ಬೆಂಗಳೂರು ಮತ್ತು ಬುಕ್ ವರ್ಮ್, ಗೋವಾ

2. ಪುಸ್ತಕಗಳನ್ನು ಆರಿಸುವಾಗ ಮಕ್ಕಳ ಹಿನ್ನೆಲೆ, ಜ್ಞಾನವನ್ನು ರೂಪಿಸುವ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡಿರಬೇಕು. ಅವರ ಆಲೋಚನೆಯನ್ನು ಪ್ರಚೋದಿಸುವ ಮಾಹಿತಿ ಒದಗಿಸುತ್ತಿದ್ದರೂ ಅದು ಮಕ್ಕಳ ಜ್ಞಾನ ವೃದ್ಧಿಸುವಂತಿರಬೇಕು.
3. ಮತ್ತೊಂದು ಮುಖ್ಯ ವಿಚಾರ ನೆನೆಪಿಟ್ಟುಕೊಂಡಿರಬೇಕಾದುದೆಂದರೆ, ಕತೆಯನ್ನು ಶಿಕ್ಷಕರು ಮಕ್ಕಳಿಗೆ ಓದಿ ಹೇಳಬೇಕು ಮತ್ತು ಹಾಗೇ ಓದಿದ ನಂತರ ಮಕ್ಕಳನ್ನು ಪುನರುಚ್ಚರಿಸುವಂತೆ ಹೇಳಬಾರದು.
4. ದಿನವೂ ಮಕ್ಕಳಿಗೆ ಕತೆ ಓದಿ ಹೇಳಲು ಪ್ರಯತ್ನಿಸಿ. ಪುಸ್ತಕವನ್ನು ಓದುವ ಮೊದಲು ಅದರ ಬಗ್ಗೆ ಮಕ್ಕಳೊಡನೆ ಚರ್ಚಿಸಿ. ಉದಾಹರಣೆಗೆ, ಓದುವ ಮೊದಲು ಕತೆಯ ಬಗ್ಗೆ ಸ್ವಲ್ಪ ಚರ್ಚಿಸುವುದು, ಪುಸ್ತಕದಲ್ಲಿರುವ ಚಿತ್ರಗಳನ್ನು ತೋರಿಸುವುದು, ಅದರ ಬಗ್ಗೆ ಪ್ರಶ್ನೆ ಕೇಳುವುದರ ಮೂಲಕ ಕುತೂಹಲ ಹೆಚ್ಚಿಸುವುದು, ಕಠಿಣ ಪದಗಳಿಗೆ ಅರ್ಥ ಹೇಳುವುದು ಇತ್ಯಾದಿ. ಇದರಿಂದ ಬೇರೆ ಭಾಷೆಯ ಮಕ್ಕಳೂ ಕತೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಕತೆಯನ್ನು ಓದುವಾಗ ಮಧ್ಯೆಮಧ್ಯೆ ನಿಲ್ಲಿಸಿ ಆಸಕ್ತಿಕರ ವಿಷಯಗಳನ್ನು ಚರ್ಚಿಸುವುದು ಮತ್ತು ಈ ನಿಲುಗಡೆಗಳು ಬಹಳ ಚಿಕ್ಕವಾಗಿರಬೇಕು ಏಕೆಂದರೆ ಕತೆಯ ಓಘಕ್ಕೆ ತಡೆಯಾಗಬಾರದು. ಕಠಿಣ ಪದದ ಅರ್ಥ ವಿವರಿಸಲು ನಿಲ್ಲಿಸುವುದು, ಯಾವುದಾದರೂ ವಿಚಾರ ಗೊಂದಲಮಯವೆನಿಸಿದರೆ ಅದನ್ನು ಸ್ಪಷ್ಟಪಡಿಸುವುದು, ಮಕ್ಕಳನ್ನು ಚಿಂತನೆಗೆ ಹಚ್ಚುವಂಥ ಪ್ರಶ್ನೆ ಕೇಳುವುದು ಅಥವಾ ಪುಸ್ತಕದಲ್ಲಿರುವ ಚಿತ್ರಗಳತ್ತ ಗಮನ ಸೆಳೆಯುವುದು, ಹೀಗೆ ನಾನಾರೀತಿಯಲ್ಲಿ ಕೇಳುತ್ತಿರುವ ಪಠ್ಯವನ್ನು ಅರ್ಥೈಸಿಕೊಳ್ಳುವಂತೆ ಓದುತ್ತಿರುವುದನ್ನು ನಿಲ್ಲಿಸಿ ಮಾತನಾಡಬೇಕು. ಆದರೆ ಒಂದು ನೆನಪಿಡಬೇಕಾದ ವಿಚಾರವೆಂದರೆ, ಶಿಕ್ಷಕರು ಕತೆಯನ್ನು ಮೊದಲೇ ಓದಿ, ಎಲ್ಲಿ ನಿಲ್ಲಿಸಬೇಕು, ಯಾವುದರ ಬಗ್ಗೆ ಮಾತನಾಡಬೇಕು ಮತ್ತು ಏಕೆ ಎಂಬುದನ್ನು ನಿಶ್ಚಯಿಸಿಕೊಂಡಿರಬೇಕು.
5. ಓದಿದ ನಂತರ ಅದರ ಬಗ್ಗೆ ಮಕ್ಕಳೊಂದಿಗೆ ಮಾತನಾಡುವುದು ಬಹಳ ಮುಖ್ಯ. ಮಕ್ಕಳಿಗೆ ಇಷ್ಟವಾಯಿತಾ, ಏಕೆ ಇಷ್ಟವಾಯಿತು ಎಂದು ಕೇಳುವುದು. ಯಾವ ಸಂದರ್ಭ ಅವರನ್ನು ತುಂಬಾ ಆಕರ್ಷಿಸಿತು, ಅದನ್ನು ಪುಸ್ತಕದಲ್ಲಿ ತೋರಿಸಲು ಹೇಳುವುದು, ಕತೆಯನ್ನು ಕೇಳುತ್ತಿದ್ದಾಗ

ಅವರಲ್ಲಿ ಮೂಡಿದ ಆಲೋಚನೆಗಳಾವುವು, ಅವರು ಕತೆಯನ್ನು ಒಪ್ಪಿಕೊಂಡರೆ ಇಲ್ಲವೇ ಅಥವಾ ಯಾಕೆ, ಹೀಗೆ ಅನೇಕ ರೀತಿಯಲ್ಲಿ ಪ್ರಶ್ನೆ ಕೇಳುವುದರ ಮೂಲಕ ಅವರನ್ನು ಅವರ ಬರವಣಿಗೆಯಲ್ಲಿ ಅಥವಾ ಮಾತಿನಲ್ಲಿ ಈ ವಿಚಾರಗಳನ್ನು ಅಳವಡಿಸಿಕೊಳ್ಳುವಂತೆ ಪ್ರೇರಿಪಿಸುವುದು. ಆ ದಿನ ಸಮಯ ಸಾಕಾಗದಿದ್ದರೆ ಮುಂದಿನ ದಿನ ಅದರ ಬಗ್ಗೆ ಚರ್ಚೆಯನ್ನು ಮುಂದುವರಿಸಬೇಕು. ನೆನಪಿಡಬೇಕಾದ ಮತ್ತೊಂದು ವಿಚಾರವೆಂದರೆ, ಓದಿ ಹೇಳಿದ ನಂತರ ಈ ರೀತಿ ಅದರ ಬಗ್ಗೆ ಸಂವಾದ ನಡೆಸದಿದ್ದರೆ ಓದಿನ ತರಗತಿಗಳ ಪ್ರಯೋಜನ ಪರಿಣಾಮಕಾರಿಯಾಗಿರುವುದಿಲ್ಲ.

**ಮಾದರಿ ಬರವಣಿಗೆ:** ಈ ವಿಧಾನದಲ್ಲಿ ಶಿಕ್ಷಕರು ತಪ್ಪಿಲ್ಲದೆ ಬರೆಯುವುದು ಹೇಗೆಂದು ಮಕ್ಕಳಿಗೆ ಮಾದರಿ ಒದಗಿಸುತ್ತಾರೆ. ಒಂದು ಸುಲಭದ ವಿಧಾನವೆಂದರೆ ಶಿಕ್ಷಕರು ಅವರು ಬರೆದಿರುವುದನ್ನು ಮಕ್ಕಳಿಗೆ ತೋರಿಸುವುದು. ಬರೆದಿರುವುದನ್ನು ಜೋರಾಗಿ ಓದಿ ಹೇಳಿ ಅದರ ಬಗ್ಗೆ ಸಂವಾದ ನಡೆಸಬಹುದು. ಉದಾಹರಣೆಗೆ, ಬರಹ ಯಾವುದರ ಬಗ್ಗೆ ಇದೆ, ಅದನ್ನೇ ಬರೆಯಲು ಪ್ರೇರೇಪಣೆ ಏನು, ಅದನ್ನು ಇನ್ನೂ ಚೆನ್ನಾಗಿ ಬರೆಯಲು ಏನು ಮಾಡುವುದು ಇತ್ಯಾದಿ. ಇದನ್ನು ಚಿಕ್ಕ ಮಕ್ಕಳಿಗೂ ಮಾಡಬಹುದು. ಉದಾಹರಣೆಗೆ, ಚಿಕ್ಕ ಮಕ್ಕಳು ಘಟನೆಗಳನ್ನು ಅನುಕ್ರಮವಾಗಿ ಬರೆಯಲು ಕಷ್ಟಪಡುತ್ತಾರೆ–ಮೊದಲು ಏನಾಯಿತು, ಅನಂತರ ಏನಾಯಿತು ಹೀಗೆ. ಆಗ ಅವರಿಗೆ ಶಿಕ್ಷಕರು ಹೇಗೆ ಘಟನೆಗಳನ್ನು ಅನುಕ್ರಮವಾಗಿ ಜೋಡಿಸುವುದು ಎಂದು ತೋರಿಸಿಕೊಡುವುದು. ಈ ರೀತಿಯಲ್ಲಿ ಚಿಕ್ಕ ಮಕ್ಕಳೂ ಹೇಗೆ ಬರೆಯಬೇಕು ಮತ್ತು ಬರೆಯುವಾಗ ಎದುರಾಗುವ ಸಮಸ್ಯೆಗಳನ್ನು ನಿವಾರಿಸುವುದು ಹೇಗೆ ಎಂದು ಕಲಿಯುತ್ತಾರೆ.



ಚಿತ್ರ 4. ಮಾದರಿ ಬರವಣಿಗೆ. ಕ್ವೆಸ್ಟ್, ಮಹಾರಾಷ್ಟ್ರ

**ಜೊತೆಗೂಡಿ ಓದುವುದು:** ಜೋರಾಗಿ ಓದುವ ತರಗತಿಯಲ್ಲಿ ಕೇವಲ ಶಿಕ್ಷಕರು ಓದುತ್ತಾರೆ ಮತ್ತು ಮಕ್ಕಳು ಕೇಳಿಸಿಕೊಳ್ಳುತ್ತಾರೆ. ಇದರ ಬದಲಾಗಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇಬ್ಬರೂ ಜೊತೆಯಾಗಿ ಓದುವುದು. ಏಕೆ ಇಬ್ಬರೂ ಜೊತೆಯಾಗಿ ಓದಬೇಕು? ಚಿಕ್ಕ ಮಕ್ಕಳು ತರಗತಿಗೆ ಬಂದಾಗ ಅವರು ಸ್ವತಂತ್ರವಾಗಿ ಓದಲಾರರು. ನಮ್ಮ ದೇಶದ ಶಾಲೆಗಳಲ್ಲಿ ನಾವು ವಿದ್ಯಾರ್ಥಿಗಳನ್ನು ಕೇವಲ ಅಕ್ಷರ ಓದಲು ಅಥವಾ ಸರಳ ಪದಗಳನ್ನು ಅಥವಾ ಸರಳ ವಾಕ್ಯಗಳನ್ನು ಓದಲು ಹೇಳುತ್ತೇವೆ. ಇದು ಚಿಕ್ಕ ಮಕ್ಕಳಿಗೆ

ಬೇಜಾರಿನ ವಿಷಯವಾಗಿರಬಹುದು ಮತ್ತು ಇದು ಅವರಿಗೆ ಶಬ್ದಸಂಪತ್ತು ಬೆಳೆಸಿಕೊಳ್ಳಲು, ನಿರರ್ಗಳತೆ ಹೊಂದಲು, ವಿಮರ್ಶಾತ್ಮಕವಾಗಿ ಆಲೋಚಿಸಲು ಸಹಾಯ ಮಾಡುವುದಿಲ್ಲ ಅಥವಾ ಖುಷಿಗಾಗಿ ಓದಲು ಅವರನ್ನು ಪ್ರೋತ್ಸಾಹಿಸುವುದಿಲ್ಲ. ಕತೆಗಳನ್ನು ಜೋರಾಗಿ ಓದುವ ಮೂಲಕ ಮತ್ತು ಪರಸ್ಪರರಿಗೆ ಓದುವುದರಿಂದ ಮಕ್ಕಳು ಅವರ ತರಗತಿಯ ಮಟ್ಟಕ್ಕಿಂತ ಹೆಚ್ಚಿನ ಓದುವ ಕೌಶಲ ಬೆಳೆಸಿಕೊಳ್ಳಬಹುದು ಮತ್ತು ಅವರ ಓದುವ ಸಾಮರ್ಥ್ಯದ ಬಗ್ಗೆ ವಿಶ್ವಾಸ ತಾಳುತ್ತಾರೆ.




ಚಿತ್ರ 5, ಜೊತೆಗೂಡಿ ಓದು, ದೊಡ್ಡ ಪುಸ್ತಕದಿಂದ, ಕ್ವೆಸ್ಟ್, ಮಹಾರಾಷ್ಟ್ರ

ಜೊತೆಗೂಡಿ ಓದುವುದಕ್ಕೆ ಕೆಲವು ಸಲಹೆಗಳು:

- ಆರಿಸಿಕೊಂಡ ಪಠ್ಯದಲ್ಲಿ ದೂರದಿಂದಲೇ ನೋಡಲು ಸಾಧ್ಯವಾಗುವಂತೆ ದೊಡ್ಡ ಅಕ್ಷರಗಳಿರಬೇಕು. "ದೊಡ್ಡ ಪುಸ್ತಕ"ಗಳನ್ನು ಬಳಸಬಹುದು, ಪದ್ಯಗಳು, ಚಿಕ್ಕ ಚಿಕ್ಕ ಕತೆಗಳು ಅಥವಾ ವಿದ್ಯಾರ್ಥಿಗಳು ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬರೆದಿರುವ ಚಾರ್ಟ್ ಆಗಬಹುದು ಅಥವಾ ಎಲ್ಲರಿಗೂ ಕಾಣುವಂತೆ ಪ್ರದರ್ಶಿತವಾಗಿರುವ ಚಾರ್ಟ್ ಬಳಸಬಹುದು.
- ಜೊತೆಗೂಡಿ ಓದುವಾಗ ನಡೆಸುವಾಗ ಪ್ರತಿ ಪದವನ್ನು ಗುರುತಿಸಿ ತೋರಿಸಿ, (ಚಿತ್ರ 4 ರಲ್ಲಿ ತೋರಿಸಿರುವಂತೆ). ಈ ರೀತಿ ಮಾಡಿದಾಗ ಮುದ್ರಿತ ಬರಹವು ಎಡದಿಂದ ಬಲಕ್ಕೆ ಚಲಿಸುತ್ತದೆ ಎಂಬುದನ್ನು ಚಿಕ್ಕ ಮಕ್ಕಳು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಪ್ರತಿ ಪದವನ್ನು ಆಸಕ್ತಿಯಿಂದ ಗಮನಿಸಲು ಸಾಧ್ಯವಾಗುತ್ತದೆ.
- ಸರಳವಾದ ಪ್ರಾಸವಿರುವ ನೆನಪಿಟ್ಟುಕೊಳ್ಳಲು ಸುಲಭವಾದ ತಮಾಷೆಯಾಗಿರುವ ಪಠ್ಯವನ್ನು ಆರಿಸಿಕೊಳ್ಳಬೇಕು. ಪದೇಪದೇ ಒಂದು ಪಠ್ಯವನ್ನು ಓದುತ್ತಿದ್ದರೆ, ಮಕ್ಕಳು ಅದನ್ನು ಊಹಿಸಲು ಸಮರ್ಥರಾಗುತ್ತಾರೆ ಮತ್ತು ಶಿಕ್ಷಕರೊಂದಿಗೆ ತಾವು ಓದುತ್ತಾರೆ. ಉದಾಹರಣೆಗೆ, ಕನ್ನಡದ "ಕಾಗೆ ಕಾಗೆ ಕೌ, ಯಾರ ಬತ್ತಾರವ್ವ" ಎಂಬು ಶಿಶು ಗೀತೆಯನ್ನು ಓದುವಾಗ ಮಕ್ಕಳು ಅದರ ಮುಂದಿನ ಭಾಗ "ಮಾವ ಬತ್ತಾನವ್ವ" ಎಂಬುದನ್ನು ಚೆನ್ನಾಗಿ ನೆನಪಿಟ್ಟು ಹೇಳಬಲ್ಲರು. ಶಿಕ್ಷಕರು ಓದುವಾಗ ಅವರೂ ಜೊತೆಗೆ ದನಿಗೂಡಿಸಬಲ್ಲರು. ಇದೇ ರೀತಿಯಲ್ಲಿ ಅನೇಕ ಶಿಶು ಪದ್ಯಗಳನ್ನು ಓದಲು ಸಾಧ್ಯ. ಹಾಗೆಯೇ ಚಿತ್ರದಲ್ಲಿರುವ ಪ್ರಾಣಿಯನ್ನು ಗುರುತಿಸಬಲ್ಲರು (ಚಿತ್ರ ತೋರಿಸಿದ್ದರೆ). ಇಲ್ಲಿ, ಚಿಕ್ಕ ಮಕ್ಕಳು ದೊಡ್ಡ ಮಕ್ಕಳಂತೆ ಶಬ್ದ ಮತ್ತು ಅಕ್ಷರವನ್ನು ಜೊತೆಗೂಡಿಸಿ ಓದಲಾರರು, ಆದರೆ ಓದಿನಲ್ಲಿ ಭಾಗವಹಿಸುತ್ತಾರೆ.

- ಪ್ರತಿ ಪಠ್ಯವನ್ನೂ ಸಾಕಷ್ಟು ಸಲ ಜೋರಾಗಿ ಓದಿ, ಹೀಗೆ ಅನೇಕ ಬಾರಿ ಪುನರಾವರ್ತನೆಯಾದಾಗ ಮಕ್ಕಳೂ ಅದನ್ನು ನೆನಪಿಟ್ಟುಕೊಂಡು ಶಿಕ್ಷಕರೊಡನೆ ದನಿಗೂಡಿಸುತ್ತಾರೆ.

**ಜೊತೆಗೂಡಿ ಬರೆಯುವುದು:** "ನಾನು ಈ ದಿನ ಒಂದು ಕೆಂಪು ಬಲೂನು ನೋಡಿದೆ" ಎಂದು ಶಿಕ್ಷಕರು ಬೋರ್ಡಿನ ಮೇಲೆ ಬರೆದು, ಮಕ್ಕಳನ್ನು ಆ ಸಾಲನ್ನು ಮುಂದುವರಿಸುವಂತೆ, ಆ ದಿನ ಅವರು ನೋಡಿದ ಮನಸ್ಸಿಗೆ ಬಂದ ಆಲೋಚನೆಗಳನ್ನು ಹೇಳಲು ಹೇಳುವುದು. ಉದಾಹರಣೆಗೆ, ರಿಷಿ ಒಂದು ಎಳೆಯ ಹಸುಗರುವನ್ನು ನೋಡಿದ, ಪ್ರವೀಣ್ ಫುಟ್ಬಾಲ್ ಆಡುತ್ತಿದ್ದುದ್ದನ್ನು ನೋಡಿದ ಹೀಗೆ. ಎಲ್ಲಾ ಮಕ್ಕಳಿಗೂ ಏನಾದರೂ ಹೇಳಲು ಹೇಳಿ ಅವೆಲ್ಲವನ್ನೂ ಬೋರ್ಡಿನ ಮೇಲೆ ಬರೆಯಲು ಹೇಳುವುದು. ಉದಾಹರಣೆಗೆ, "ನಾನು ಈ ದಿನ ಒಂದು ______________" ಎಂದು ಬರೆದು ಮಕ್ಕಳಿಗೆ ಹೀಗೆ ಹೇಳಬಹುದು, ರಿಷಿಗೆ 'ಕರು' ಎಂದು ಬರೆಯಲು ಗೊತ್ತು ಆದರೆ ಮುಂದಕ್ಕೆ ಬರೆಯಲು ಗೊತ್ತಿರುವುದಿಲ್ಲ ಆಗ ಶಿಕ್ಷಕರು ಮಧ್ಯ ಪ್ರವೇಶಿಸಿ ವಾಕ್ಯ ಪೂರ್ತಿ ಮಾಡಬಹುದು. ಮತ್ತೊಂದು ದಿನ ತರಗತಿಯಲ್ಲಿ ಬೆಳಿಗ್ಗೆ ಮನೆಯಲ್ಲಿ ಏನು ತಿಂಡಿ ತಿಂದಿರಿ ಎಂದು ಕೇಳುತ್ತಾ "ನಾನು ಇವತ್ತು ____________ತಿಂದೆ" ವಾಕ್ಯ ಪೂರ್ತಿ ಮಾಡಲು ಹೇಳಿ ಬರೆಯಿಸುವುದು. ಇನ್ನೊಂದು ದಿನ ಎಲ್ಲರೂ ಹೊರಗೆ ಸ್ವಲ್ಪ ಸುತ್ತಾಡಲು ಹೋಗುವುದು, ಮರಳಿ ತರಗತಿಗೆ ಬಂದ ನಂತರ ಹೊರಗೆ ನೋಡಿದ ಅನುಭವದ ಬಗ್ಗೆ ಮಾತನಾಡುವುದು ಮತ್ತು ಅದನ್ನು ಎಲ್ಲರೂ ಸೇರಿ ಒಂದು ಬರಹವಾಗಿಸುವುದು. ಹೀಗೆ ಒಟ್ಟುಗೂಡಿ ಬರೆಯುವುದೇ ಜೊತೆಗೂಡಿ ಬರೆಯುವುದು.

ಹೀಗೆ ಬರೆಯುವುದರ ಉದ್ದೇಶವೇನೆಂದರೆ, ಮಕ್ಕಳನ್ನು ಬರಹದ ಜೊತೆ ಸಂಬಂಧ ಬೆಳಸಿಕೊಳ್ಳುವಂತೆ ಮತ್ತು ಅದು ಅವರ ತರಗತಿಯ ಮಟ್ಟ ಮೀರಿ ಮುಂದುವರಿಯುವಂತೆ ಬೆಂಬಲಿಸುವುದು. ಜೊತೆಗೂಡಿ ಬರೆಯುವಾಗ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಬ್ಬರೂ ಒಟ್ಟಿಗೆ ಕಲೆತು ಕತೆಗಳನ್ನು, ಸಂದೇಶಗಳನ್ನು ಹೆಣೆಯುತ್ತಾರೆ. ಈ ಅವಕಾಶವನ್ನು ಶಿಕ್ಷಕರು ತಮ್ಮ ಆಲೋಚನೆಗಳನ್ನು ಮಾದರಿಯಾಗಿ ಬಳಸಿ ಮಕ್ಕಳಿಗೆ ಆಲೋಚನೆ ಮಾಡುವುದನ್ನು ಮತ್ತು ಅದು ಒಂದು ಬರವಣಿಗೆಯ ರೂಪವನ್ನು ಪಡೆಯಬಹುದೆಂದು, ಬರಹ ರೂಪದ ನಿಯಮಗಳನ್ನು ಮಕ್ಕಳಿಗೆ ಕಲಿಸಿಕೊಡಬಹುದು. ಉದಾಹರಣೆಗೆ, "ನನ್ನ ಚೆಂಡನ್ನು ಯಾರು ತೆಗೆದುಕೊಂಡರು" ಎಂದು ಕೇಳಿ, "ಓ, ಇದು ಒಂದು ಪ್ರಶ್ನೆ, ನಾನಿದಕ್ಕೆ ವಾಕ್ಯದ ಕೊನೆಯಲ್ಲಿ ಪ್ರಶ್ನಾರ್ಥಕ ಚಿನ್ಹೆ ಹಾಕಬೇಕು" ಎಂದು ಪ್ರಶ್ನಾರ್ಥಕ ಚಿನ್ಹೆ ಬರೆಯುವುದು. ಮಕ್ಕಳು ಈ ಚಟುವಟಿಕೆಯನ್ನು ಗಮನಿಸುತ್ತಾರೆ ಮತ್ತು ಕಲಿಯುತ್ತಾರೆ. ಮಕ್ಕಳನ್ನು ಈ ವಾಕ್ಯದ ಮುಂದಿನ ಭಾಗವನ್ನು ಹೇಳಲು ಕೇಳುತ್ತಾ ಹಾಗೇ ಮುಂದುವರಿಸುತ್ತಾ ಹೋಗಬಹುದು. ಬರೆದು ಮುಗಿಸಿದ ನಂತರ ಅದನ್ನು ತರಗತಿಯೊಳಗೆ ಒಂದೆರಡು ಸಲ ಓದಿದರೆ ಅದೇ ಜೊತೆಗೂಡಿ ಓದುವ ಚಟುವಟಿಕೆಯಾಗುತ್ತದೆ. ವಾಸಂತಿಯ ತರಗತಿಯಲ್ಲಿ ಹೀಗೆ ಜೊತೆಗೂಡಿ ಬರೆಯುವ ಚಟುವಟಿಕೆಯು ಅವರ ತರಗತಿಯಲ್ಲಿರುವ ವಿಭಿನ್ನ ಭಾಷಿಕ ಹಿನ್ನೆಲೆಯ ಮಕ್ಕಳಿಗೆ ಅನುಕೂಲವಾಗುತ್ತದೆ. ಏಕೆಂದರೆ ಪ್ರತಿಯೊಬ್ಬರೂ ತಮ್ಮ ತಮ್ಮ ಅನುಭವವನ್ನು ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ನೀಡಬಲ್ಲರು.



ಚಿತ್ರ 6. ಜೊತೆಗೂಡಿ ಬರೆಯುವುದು, ಕ್ವೆಸ್ಟ್, ಮಹಾರಾಷ್ಟ್ರ

**ಮಾರ್ಗದರ್ಶಿತ ಓದು[5]:** ಓದಿನ ಜವಾಬ್ದಾರಿಯನ್ನು ಶಿಕ್ಷಕರು ಮಕ್ಕಳಿಗೆ ವರ್ಗಾಯಿಸುವುದು. ಶಿಕ್ಷಕರು ಓದುವುದು ಮತ್ತು ಮಕ್ಕಳು ಜೊತೆಗೂಡುವ ಓದಿನಂತಲ್ಲದೆ, ಇದರಲ್ಲಿ ಮಕ್ಕಳು ಓದುತ್ತಾರೆ ಶಿಕ್ಷಕರು ಬೆಂಬಲ ನೀಡುತ್ತಾರೆ. ಈ ವಿಧಾನದಲ್ಲಿ ಅನುಸರಿಸಬೇಕಾದ ಕ್ರಮಗಳು:

1. ಓದಿನಲ್ಲಿ ಸಮಾನ ಹಂತದಲ್ಲಿರುವ ಚಿಕ್ಕ ಮಕ್ಕಳ ಒಂದು ಗುಂಪನ್ನು ಆರಿಸುವುದು. ಅಂದರೆ ಒಂದೇ ರೀತಿಯ ಓದಿನ ಸೂಚನೆ ಬೇಕಾಗಿರುವ ಮಕ್ಕಳನ್ನು ಗುಂಪು ಮಾಡುವುದು.
2. ಸ್ವಲ್ಪ ಸಹಾಯದೊಂದಿಗೆ ಮಕ್ಕಳು ಓದಬಹುದಾದ ಪಠ್ಯವನ್ನು ಆರಿಸುವುದು. ಇದು ಜೋರಾಗಿ ಓದಿ ಹೇಳುವಂತಲದ್ದೇ ಮತ್ತು ಜೊತೆಗೂಡಿ ಓದುವ ರೀತಿಯೂ ಅಲ್ಲದೆ, ಓದಲು ಆರಿಸುವ ಪಠ್ಯಗಳು ಮಕ್ಕಳು ಓದುವ ಹಂತದಲ್ಲಿರಬೇಕು. ಹೀಗೆ ಓದಿಸುವ ಉದ್ದೇಶವೇನೆಂದರೆ ಮಕ್ಕಳಲ್ಲಿ ನಿರರ್ಗಳವಾಗಿ ಓದುವ ಸಾಮರ್ಥ್ಯ, ಅರ್ಥಗ್ರಹಿಕೆಯನ್ನು ಮತ್ತು ಪದ ವಿಭಾಗ ಕೌಶಲಗಳನ್ನು ಬೆಳೆಸುವುದಾಗಿದೆ.
3. ಗುಂಪಿನ ಎಲ್ಲಾ ಮಕ್ಕಳು ಏಕಕಾಲದಲ್ಲಿ ಒಂದೇ ಪಠ್ಯವನ್ನು ಓದುವುದು. ಪ್ರತಿ ವಿದ್ಯಾರ್ಥಿಯು ತಮ್ಮ ಪಾಡಿಗೆ ತಾವು ಓದಬೇಕು, ಶಿಕ್ಷಕರು ಪ್ರತಿಮಗುವನ್ನೂ ಎಚ್ಚರಿಕೆಯಿಂದ ಗಮನಿಸುವುದು ಮತ್ತು ತಡೆಯಿಲ್ಲದೆ ಓದುವ ಕೌಶಲ ಬೆಳೆಸಿಕೊಳ್ಳುವಂತೆ ಅವರಿಗೆ ಸಹಾಯ ಮಾಡುವುದು. ಪ್ರತಿಯೊಂದು ಓದಿನಲ್ಲೂ, ಓದಲು ಕೂರುವ ಮೊದಲು, ಪಠ್ಯವನ್ನು ಪರಿಚಯಿಸುವುದು ಮತ್ತು ಕೊನೆಯಲ್ಲಿ ಆ ವಿಷಯದ ಚರ್ಚೆ ಮಾಡುವುದು ಒಳ್ಳೆಯದು.



ಚಿತ್ರ7. ಮಾರ್ಗದರ್ಶಿತ ಓದು, ಕ್ವೆಸ್ಟ್, ಮಹಾರಾಷ್ಟ್ರ

ಮಾರ್ಗದರ್ಶಿತ ಓದು ಮಕ್ಕಳಿಗೆ ಅಭ್ಯಾಸವು ಪುನಸ್ಥಾಪಿತವಾಗುವಂತೆ ಮಾಡುತ್ತದೆ, ಶಿಕ್ಷಕರು ಓದಿದ್ದು ಮಾದರಿಯಾಗಿ ಮಕ್ಕಳು ಅದೇ ರೀತಿ ತಂತ್ರ ಕೌಶಲಗಳನ್ನು ಕಲಿಯಲು ಸಾಧ್ಯವಾಗುತ್ತದೆ. ಇದು ವಾಸಂತಿಯವರಿಗೆ ಬಹಳ ಉಪಯುಕ್ತ ತಂತ್ರವಾಗುತ್ತದೆ, ಏಕೆಂದರೆ ಅವರ ತರಗತಿಯಲ್ಲಿ ವಿಭಿನ್ನ ಕಲಿಕಾ ಹಂತದಲ್ಲಿರುವ ಮಕ್ಕಳಿದ್ದಾರೆ, ಈ ಕ್ರಮದಲ್ಲಿ ಓದು ಎಂಬುದು ಆ ಮಕ್ಕಳಿಗೆ ಪುನಸ್ಥಾಪಿತವಾಗುತ್ತದೆ.

**ಮಾರ್ಗದರ್ಶಿತ ಬರಹ:** ನಮ್ಮ ದೇಶದ ಶಾಲೆಗಳಲ್ಲಿ, ಮಕ್ಕಳು ಸಂವಾದದ ಮುಂದಿನ ರೂಪವಾಗಿ ಬರಹವನ್ನು ಉಪಯೋಗಿಸುವಂತೆ ಕಲಿಸಲು ಹೆಚ್ಚು ಪ್ರಯತ್ನ ಮಾಡುವುದಿಲ್ಲ. ಹಿರಿಯ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಪತ್ರ ಬರೆಯುವುದು, ಪ್ರಬಂಧ ಬರೆಯುವುದು ಹೇಗೆಂದು ಕಲಿಸುತ್ತಾರೆ ಆದರೆ ಚಿಕ್ಕ ಮಕ್ಕಳಿಗೆ ಸರಿಯಾದ ಕಾಗುಣಿತ ಬರೆಯಲು ಮತ್ತು ಸುಂದರ ಹಸ್ತಾಕ್ಷರ ಕಲಿಸಲು ಬರವಣಿಗೆಯನ್ನು ಉಪಯೋಗಿಸಲಾಗುತ್ತದೆ. ಆದರೆ, ಅದಕ್ಕಿಂತಲೂ ಬರಹಕ್ಕೆ ಬೇರೆಯದೇ ಆದ ಅಸ್ತಿತ್ವವಿದೆ! ಚಿಕ್ಕ ಮಕ್ಕಳೂ ಕೂಡ ಅರ್ಥಪೂರ್ಣವಾಗಿ ಬರೆಯುವುದು ಹೇಗೆಂದು ಕಲಿಯಬಲ್ಲರು[6]. ಇದಕ್ಕೆ ಮಕ್ಕಳು ಏನೂ ಬೇಕಾದರೂ ಬರೆಯಬಹುದೆಂದು ಸಮಯ ಕೊಡುವುದು ಪರಿಹಾರವಲ್ಲ. ಇದರಿಂದ ಪ್ರಯೋಜನವಿಲ್ಲ. ಏಕೆಂದರೆ. ಚೆನ್ನಾಗಿ ಬರೆಯುವವರು ಚೆನ್ನಾಗಿ ಬರೆಯುತ್ತಾರೆ, ಸುಮಾರಾಗಿ ಬರೆಯುವವರು ಮತ್ತು ತಪ್ಪುತಪ್ಪು ಬರೆಯುವವರು ಅದೇ ಹಂತದಲ್ಲಿ ಉಳಿಯುತ್ತಾರೆ ಮತ್ತು ಅವರು ಬರೆಯುವುದರ ಬಗ್ಗೆ ಆಸಕ್ತಿಯನ್ನೇ ಕಳೆದುಕೊಳ್ಳಬಹುದು, ಶಿಕ್ಷಕರಿಂದ ಯಾವುದೇ ಸೂಚನೆ ಅಥವಾ ಮಾರ್ಗದರ್ಶನ ಸಿಗದೆ. ಇದರ ಬದಲು, "ಮಾರ್ಗದರ್ಶಿತ ಬರಹ" ಹೇಗೆ ಮಾಡಬಹುದೆಂದು ಶಿಕ್ಷಕರಿಗೆ ಕೆಲವು ಸಲಹೆಗಳನ್ನು ನಾವು ಶಿಫಾರಸ್ಸು ಮಾಡುತ್ತೇವೆ;

- ವಿದ್ಯಾರ್ಥಿಗಳು ವಿವಿಧ ಬಗೆಯ ಬರವಣಿಗೆಗಳನ್ನು ಅರ್ಥಮಾಡಿಕೊಳ್ಳುತ್ತಾರೆ. ಉದಾಹರಣೆಗೆ, ನಿಜಜೀವನದ ಕತೆಗೂ (ವೈಯಕ್ತಿಕ ಅನುಭವದ ನಿರೂಪಣೆ) ಕಲ್ಪನಾ ಕತೆಗೂ ಇರುವ ವ್ಯತ್ಯಾಸ ಅಥವಾ ಪದ್ಯ ಬರೆಯುವುದು ಅಥವಾ ಪತ್ರ ಇತ್ಯಾದಿ.
- ಶಿಕ್ಷಕರು ವಿವಿಧ ಸಾಹಿತ್ಯಕ ರೂಪಗಳನ್ನು ಬರೆಯುವುದು ಹೇಗೆ ಎಂದು ಮಾರ್ಗದರ್ಶನ ನೀಡುವುದರೊಂದಿಗೆ ಅವುಗಳನ್ನು ಆಸಕ್ತಿಕರವಾಗಿರುವಂತೆ ಬರೆಯಲು ಮಾದರಿಗಳನ್ನು ತೋರಿಸುವುದು.

- ಪ್ರತಿಯೊಂದು ಮಗುವಿಗೆ ಅಥವಾ ಚಿಕ್ಕ ಗುಂಪಿಗೆ ಬರೆಯಲು ಬೆಂಬಲ ನೀಡುವುದು.
- ಶಿಕ್ಷಕರು ವಿವಿಧ ಬರವಣಿಗೆಯ ತಂತ್ರಗಳನ್ನು ಮಕ್ಕಳಿಗೆ ಹೇಳಿಕೊಡುವುದು ಮತ್ತು ತರಬೇತಿ ನೀಡುವುದು.
- ಸಹಪಾಠಿಗಳು ಪರಸ್ಪರರಿಗೆ ಹಿಮ್ಮಾಹಿತಿ ನೀಡಬಹುದು.
- ಮಕ್ಕಳು ಒಂದಕ್ಕಿಂತ ಹೆಚ್ಚು ಕರಡು ತಯಾರಿಸಬಹುದು, ಪ್ರತಿಯೊಂದರಲ್ಲೂ ಅವರ ಬರವಣಿಗೆ ಹೆಚ್ಚು ನಿಖರವಾಗುತ್ತಾ ಹೋಗುತ್ತದೆ ಮತ್ತು ಸರಿಯಾದ ಮಾರ್ಗದರ್ಶನದಿಂದ ಇದು ಸಾಧ್ಯವಾಗುತ್ತದೆ.




ಚಿತ್ರ 8. ಮಾರ್ಗದರ್ಶಿತ ಬರಹ, ಕ್ವೆಸ್ಟ್, ಮಹಾರಾಷ್ಟ್ರ

**ಸ್ವತಂತ್ರ ಓದು:** ಮಕ್ಕಳಿಗೆ ಸ್ವತಂತ್ರವಾಗಿ ಅಥವಾ ಮತ್ತೊಬ್ಬರ ಜೊತೆ ಸೇರಿ ಓದಲು ಸಮಯ ಬೇಕಾಗುತ್ತದೆ. ಮಕ್ಕಳಿಗೆ ಸ್ವತಂತ್ರವಾಗಿ ಓದಲು ಅವಕಾಶ, ಪ್ರೋತ್ಸಾಹ ಕೊಟ್ಟಾಗ ಅವರು ತಮ್ಮಷ್ಟಕ್ಕೇ ತಾವೇ, ನಿಶ್ಯಬ್ದವಾಗಿ ಓದುವ ಸಾಮರ್ಥ್ಯ ಬೆಳೆಸಿಕೊಳ್ಳಲು ಸಹಾಯವಾಗುತ್ತದೆ. ಇದು ಓದಿನ ಮಹತ್ವ ತಿಳಿಯಲು, ವಿಮರ್ಶೆ ಮಾಡಿಕೊಳ್ಳಲು, ಖುಷಿಗಾಗಿ ಓದುವುದನ್ನು ಆಸ್ವಾದಿಸಲು ಕೂಡ ಸಹಾಯವಾಗುತ್ತದೆ. ಹೀಗೆ ಓದಲು ತರಗತಿಯಲ್ಲಿ ಅಥವಾ ಗ್ರಂಥಾಲಯದಲ್ಲಿ ಮಕ್ಕಳು ತಾವೇ ಪುಸ್ತಕಗಳನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವಿರಬೇಕು.



ಚಿತ್ರ 9. ಸ್ವತಂತ್ರ ಓದು, ಚಿತ್ರ ಕೃಪೆ: ಹರ್ಷಿತಾ ವಿ. ದಾಸ್

**ಸ್ವತಂತ್ರ ಬರವಣಿಗೆ:** ಮಕ್ಕಳಿಗೆ ಸ್ವತಂತ್ರವಾಗಿ ಬರೆಯಲು ಅವಕಾಶ ಕೊಡಬೇಕು, ಅವರ ಸ್ವಂತ ಅನುಭವ ಅಥವಾ ಅವರೇ ಕಲ್ಪಿಸಿಕೊಂಡ ಕತೆಗಳನ್ನು ಬರೆಯಲು ಹೇಳುವುದು. ಇದು ಮಕ್ಕಳಿಗೆ ಜೊತೆಗೂಡಿ ಬರೆಯುವುದು ಮತ್ತು ಮಾರ್ಗದರ್ಶಿತ ಬರಹದಲ್ಲಿ ಕಲಿತ ಕೌಶಲಗಳನ್ನು ಬಳಸಿ ಸ್ವತಂತ್ರವಾಗಿ ಬರೆಯುವ ಅವಕಾಶ ಒದಗಿಸುತ್ತದೆ.



ಚಿತ್ರ 10. ಸ್ವತಂತ್ರ ಬರವಣಿಗೆ

**ವಿದ್ಯಾರ್ಥಿ ಮತ್ತು ಶಿಕ್ಷಕರ ಪಾತ್ರಗಳಲ್ಲಿ ಸಮತೋಲನ:** ಇಲ್ಲಿ ಬೋಧಿಸಲು ಸಲಹೆ ನೀಡಲಾಗಿರುವ ವಿಭಿನ್ನ ವಿಧಾನಗಳನ್ನು ನೋಡಿ. ಶಿಕ್ಷಕಿ ಕೇಂದ್ರಿತ ಮತ್ತು ವಿದ್ಯಾರ್ಥಿ ಕೇಂದ್ರಿತ ವಿಧಾನಗಳಲ್ಲಿ ಸಮತೋಲನವಿರುವುದನ್ನು ಕಾಣಬಹುದು. ಚಿತ್ರ 11 ಶಿಕ್ಷಕಿ ಕೇಂದ್ರಿತ ವಿಧಾನದಿಂದ ಕಲಿಕಾ ರೇಖೆಯು ವಿದ್ಯಾರ್ಥಿ ಕೇಂದ್ರಿತವಾಗುತ್ತಾ ಹೋಗುವುದನ್ನು ಇದು ಪ್ರದರ್ಶಿಸುತ್ತದೆ. ಈ ಪಥವನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಬಹಳ ಮುಖ್ಯ, ಅದರೊಂದಿಗೆ ಪ್ರತಿ ವಿದ್ಯಾರ್ಥಿಯ ಕಲಿಕೆಯ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಂಡು ಅವರಿಗೆ ಬೇಕಾದ ಬೆಂಬಲ ನೀಡಬೇಕಾದುದು ಅಷ್ಟೇ ಮುಖ್ಯ.

ಇಲ್ಲಿ ಒಂದು ಫ್ಲೋ ಚಾರ್ಟ್ ಬರಬೇಕು

ನಿಧಾನವಾಗಿ ಜವಾಬ್ದಾರಿಯನ್ನು ಹೊರಿಸುವ ಮಾದರಿ, ಪಿಯರ್ಸನ್ ಮತ್ತು ಗ್ಯಾಲೆಗರ್, 1983.

ಬಿಳಿ ಬಣ್ಣ–ವಿದ್ಯಾರ್ಥಿ ಜವಾಬ್ದಾರಿ, ಹಳದಿ ಬಣ್ಣ–ಶಿಕ್ಷಕಿಯ ಬೆಂಬಲ

ಹೆಚ್ಚು – ಕಡಿಮೆ–ಹೆಚ್ಚು – ಕಡಿಮೆ

ಜೋರಾಗಿ ಓದು/ಮಾದರಿ ಬರವಣಿಗೆ, ಜೊತೆಗೂಡಿ ಓದುವುದು/ ಬರೆಯುವುದು, ಮಾರ್ಗದರ್ಶಿತ ಓದು/ಬರಹ, ಸ್ವತಂತ್ರ ಓದು/ಬರಹ

ಚಿತ್ರ 11. ಓದುವುದನ್ನು ಮತ್ತು ಬರೆಯುವುದನ್ನು ಕಲಿಸುವ ವಿಧಾನಗಳು

**(ಕ) ಯಾವುದರಿಂದ ಕಲಿಸಬೇಕು?**

ನಾವೀಗ ಮೂರನೇ ಪ್ರಶ್ನೆಗೆ ಉತ್ತರ ಹುಡುಕೋಣ. ಒಂದು ವಿಚಾರವಂತೂ ಸ್ಪಷ್ಟವಾಗಿದೆ, ಏನೆಂದರೆ ಮೇಲೆ ವಿವರಿಸಿದ ವಿವಿಧ ಬಗೆಯ ಕಲಿಕೆಗೆ ಪಠ್ಯಪುಸ್ತಕಗಳಷ್ಟೇ ಸಾಕಾಗುವುದಿಲ್ಲ. ಹಾಗಾದರೆ, ಈ ಸಮಗ್ರ ಸಾಕ್ಷರತಾ ತರಗತಿಯಲ್ಲಿ ಶಿಕ್ಷಕಿಯು ಮತ್ಯಾವ ಸಾಮಗ್ರಿಗಳನ್ನು ಬಳಸಬೇಕು? ಒಂದು ಸಂಕ್ಷಿಪ್ತ ಪಟ್ಟಿಯನ್ನು ಇಲ್ಲಿ ಕೊಡಲಾಗಿದೆ:

- **ಪಠ್ಯಪುಸ್ತಕಗಳು:** ಇವುಗಳನ್ನು ತರಗತಿಯಲ್ಲಿ ವಿಶೇಷವಾಗಿ, ಮಾರ್ಗದರ್ಶಿತ ಓದಿಗೆ ಬಳಸಬಹುದು. ಒಂದು ವೇಳೆ ಪಠ್ಯಪುಸ್ತಕವು ಮಕ್ಕಳ ಓದುವ ಸಾಮರ್ಥ್ಯಕ್ಕೆ ಸಮನಾಗಿಲ್ಲದಿದ್ದರೆ, ಹೆಚ್ಚು ಅಥವಾ ಕಡಿಮೆ ಆಗಿದ್ದರೆ ಪರ್ಯಾಯ ಪಠ್ಯವನ್ನು ಉಪಯೋಗಿಸಬೇಕಾಗುತ್ತದೆ. ಇಲ್ಲದಿದ್ದರೆ ಪಠ್ಯಪುಸ್ತಕವನ್ನು ಅನೇಕ ಮಕ್ಕಳಿಗೆ ಮಾರ್ಗದರ್ಶಿತ ಓದಿನ ಅಭ್ಯಾಸಕ್ಕೆ ಉಪಯೋಗಿಸಿಕೊಳ್ಳಬಹುದು.
- **ಮಕ್ಕಳ ಸಾಹಿತ್ಯ:** ಮಕ್ಕಳ ಸಾಹಿತ್ಯವಿಲ್ಲದೆ ನಾವು ಅರ್ಥಪೂರ್ಣ ಸಾಕ್ಷರತಾ ತರಗತಿಯನ್ನು ನಡೆಸಲು ಸಾಧ್ಯವಿಲ್ಲ. ಜೋರಾಗಿ ಓದಿ ಹೇಳುವ ಮತ್ತು ಜೊತೆಗೂಡಿ ಓದುವ ಎರಡೂ ಚಟುವಟಿಕೆಗಳು ಉತ್ತಮ ಮಕ್ಕಳ ಸಾಹಿತ್ಯ ಪುಸ್ತಕಗಳ ಮೇಲೆ ಅವಲಂಬಿತವಾಗಿವೆ. ನಿಮ್ಮ ಶಾಲೆಯಲ್ಲಿ ಗ್ರಂಥಾಲಯವಿಲ್ಲದಿದ್ದರೆ ಗ್ರಂಥಾಲಯವನ್ನು ಪ್ರಾರಂಭಿಸಲು ಸಹಾಯಕ್ಕಾಗಿ ವಿಚಾರಿಸಿ[7]. ಗ್ರಂಥಾಲಯವು ಮಕ್ಕಳಿಗೆ ಸ್ವಂತ ಓದಿಗಾಗಿ ಪುಸ್ತಕಗಳನ್ನು ಎರವಲು ಪಡೆಯುವ ಸೌಲಭ್ಯ ಒದಗಿಸಬೇಕು. ಅದರ ಜೊತೆಗೆ ಶಿಕ್ಷಕರು ತರಗತಿಯ ಒಂದು ಜಾಗದಲ್ಲಿ ಓದುವ ಮೂಲೆಯನ್ನು ಒದಗಿಸಬಹುದು[8].
- **ಕಾರ್ಯಹಾಳೆಗಳು:** ಕಾರ್ಯಹಾಳೆಗಳಿಗೂ ತರಗತಿಯೊಳಗೆ ಜಾಗ ಒದಗಿಸಬೇಕು. ಇವು ತರಗತಿಯೊಳಗೆ ನಡೆಸಿದ ಕೌಶಲ ಚಟುವಟಿಕೆಗಳಿಗೆ ಅಭ್ಯಾಸ ಮಾಡಲು ಅವಕಾಶ ಒದಗಿಸುತ್ತವೆ.
- **ಅಕ್ಷರ, ಶಬ್ದ, ಅಕ್ಷರ–ಶಬ್ದದ ಸಂಬಂಧ ಇವುಗಳನ್ನು ಕಲಿಸಲು ಆಟಗಳು:** ಈ ಚಟುವಟಿಕೆಗಳನ್ನು ಮಾಡಲು ವೈವಿಧ್ಯಮಯ ಸಾಮಗ್ರಿಗಳು ಬೇಕಾಗುತ್ತವೆ. ಅಕ್ಷರ ಪಟಗಳು, ಮರಳು, ಮಣಿಗಳು ಮುಂತಾದವುಗಳನ್ನು ಅಕ್ಷರಗಳನ್ನು ತಿದ್ದಲು ಮಕ್ಕಳಿಗೆ ಕೊಡಬಹುದು. ಆಟಗಳು, ಫಝಲ್‌ಗಳು ಮುಂತಾದ ಚಟುವಟಿಕೆಗಳನ್ನು ಸರಾಗವಾಗಿ ಓದುವುದನ್ನು ಕಲಿಸಲು ಬಳಸಬಹುದು[9].

- **ಮುದ್ರಣ ಸಾಮಗ್ರಿಯ ಬಾಹುಳ್ಯ**: ತರಗತಿಯ ಕೋಣೆ ಮತ್ತು ಸುತ್ತಮುತ್ತಲಿನ ಆವರಣ ಮಕ್ಕಳು ಸುಲಭವಾಗಿ ಅರ್ಥಮಾಡಿಕೊಳ್ಳುವಂಥ ಮುದ್ರಿತ ಪಠ್ಯಗಳಿಂದ ಆವೃತಗೊಂಡಿರಬೇಕು[10]. ಇಲ್ಲಿ ಮಕ್ಕಳು ಬರೆದ ಬರಹಗಳು, ಬಿಡಿಸಿದ ಚಿತ್ರಗಳನ್ನು ಕೂಡ ಪ್ರದರ್ಶಿಸಬಹುದು.
- **ವಿವಿಧ ಸಾಮಗ್ರಿಗಳು:** ಇವು ಬೊಂಬೆ, ರಂಗ ಪರಿಕರಗಳು, ಕತೆ ಹೇಳಲು ಬಳಸುವ ಸಾಮಗ್ರಿಗಳು, ಕಾಗದಗಳು, ಪೆನ್ಸಿಲ್, ಕ್ರೆಯಾನ್, ಸ್ಲೇಟ್ ಮುಂತಾದವುಗಳನ್ನು ಒಳಗೊಂಡಿರಬಹುದು.

ಈ ಪಟ್ಟಿಯು ಸಂಪೂರ್ಣವಾದುದೇನಲ್ಲ, ಇದಕ್ಕೆ ಶಿಕ್ಷಕರು ಇನ್ನೂ ಅಷ್ಟು ಸಾಮಗ್ರಿಗಳನ್ನು ಸೇರಿಸಿಕೊಳ್ಳಬಹುದು ಮತ್ತು ಹಾಗೇ ಸಾಮಗ್ರಿಗಳನ್ನು ಸೇರಿಸಿಕೊಳ್ಳಲು, ಉಪಯೋಗಿಸಲು ಶಿಕ್ಷಕರು ಮುಂದಾಗಬೇಕು.

**ತರಗತಿ ಕೋಣೆಯೊಳಗೆ ಸಮಗ್ರ ಸಾಕ್ಷರತೆ: ಸಾಧ್ಯವೇ?**

ದೇಶದ ಆರಂಭಿಕ ಭಾಷೆ ಮತ್ತು ಆರಂಭಿಕ ಸಾಕ್ಷರತೆಯ ಬಗೆಗಿನ ವರದಿಯು (ಆರಂಭಿಕ ಬಾಲ್ಯ ಶಿಕ್ಷಣ ಮತ್ತು ಅಭಿವೃದ್ಧಿ ಕೇಂದ್ರ, 2016) ತರಗತಿಯೊಳಗೆ ಕೂಡ್ರೊಂದು ಸಮಗ್ರ ವಿಧಾನವನ್ನು ಅನುಸರಿಸಬೇಕು ಎಂದು ಶಿಫಾರಸ್ಸು ಮಾಡುತ್ತದೆ. ಆದರೆ, ಒಬ್ಬ ಶಿಕ್ಷಕಿಯು, ತರಗತಿ ಕೋಣೆಯೊಳಗಿನ ಸೀಮಿತ ಸಮಯ ಮತ್ತು ಸೀಮಿತ ಸ್ಥಳದಲ್ಲಿ ಈ ಸಮಗ್ರ ಸಾಕ್ಷರತೆಯನ್ನು ಹೇಗೆ ನಡೆಸಲು ಸಾಧ್ಯ? ಭಾರತದ ಸಂದರ್ಭದಲ್ಲಿ, ಚೆನ್ನಾಗಿ ಪಾಠ ಮಾಡಲು ಇಲ್ಲಿ ಎಷ್ಟೊಂದು ಅಡತಡೆಗಳಿರುವಾಗ ಇದು ಪ್ರಾಯೋಗಿಕವೇ? ಇದಕ್ಕೆ ಉತ್ತರ ಹುಡುಕಲು ಅನೇಕ ಸಂಸ್ಥೆಗಳು ಎನ್‌ಜಿಓ ಗಳ ಜೊತೆ ಸೇರಿ ಪ್ರಯೋಗ ಮಾಡುತ್ತಾ ತರಗತಿಯೊಳಗೆ ಸಮಗ್ರ ಸಾಕ್ಷರತಾ ಚೌಕಟ್ಟನ್ನು ತರುವ ಪ್ರಯತ್ನ ಮಾಡಿವೆ. ಅಂಥವರುಗಳಲ್ಲಿ ಕೀರ್ತಿ ಜಯರಾಮ್ ಒಬ್ಬರು (ಆರಂಭಿಕ ಸಾಕ್ಷರತಾ ಅಭಿವೃದ್ಧಿ ಸಂಸ್ಥೆ, ಒಇಎಲ್‌ಪಿ). ಅವರು ತಮ್ಮ ಪ್ರಯೋಗದ ಅನುಭವವನ್ನು *ಪ್ರಸ್ತುತ ಶಿಕ್ಷಣ ಸಂವಾದ*[11] ಎಂದು ಎರಡು ಭಾಗಗಳಲ್ಲಿ ಪ್ರಕಟಿಸಿದ್ದಾರೆ. ದೆಹಲಿಯ ಸರ್ಕಾರಿ ಶಾಲೆಗಳಲ್ಲಿ ಮತ್ತು ಬಹಳ ಹಿಂದುಳಿದ ಪ್ರದೇಶದಲ್ಲಿರುವ ಅಜ್ಮೀರ್[12] ಶಾಲೆಗಳಲ್ಲಿ ಅವರು ನಡೆಸಿರುವ ಪ್ರಯೋಗವು ಬದಲಾವಣೆಗೆ ತಯಾರಾದ ಮತ್ತು ಸ್ವಯಂ ಸ್ಫೂರ್ತಿಯಿಂದ ಕೆಲಸ ಮಾಡುವ ಶಿಕ್ಷಕರಿದ್ದರೆ, ಏನೂ ಸಂಪನ್ಮೂಲಗಳಿಲ್ಲದಿದ್ದರೂ ಇದು ಸಾಧ್ಯ ಎಂದು ಹೇಳುತ್ತದೆ[13]. ಭಾರತದ ಅನೇಕ ಶಾಲೆಗಳಲ್ಲಿ ಕೆಲಸ ಮಾಡಿರುವ ಕೀರ್ತಿ ಜಯರಾಮ್ ರವರು ತಮ್ಮ ಬರಹದಲ್ಲಿ, ಆರಂಭಿಕ ಹಂತದಲ್ಲಿ ಸಾಕ್ಷರತೆಯ ಭದ್ರ ಬುನಾದಿ ಹಾಕಲು ಓದು ಬರಹದ ಕೌಶಲಗಳನ್ನು, ಅರ್ಥಗ್ರಹಿಕೆಯೊಂದಿಗೆ ಕಲಿಸಬೇಕಾಗಿರುವುದು ಬಹಳ ಮುಖ್ಯ ಎನ್ನುತ್ತಾರೆ. ಇದನ್ನೇ ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಸಾಕ್ಷರರಾಗಲು ಹೊರಟಿರುವ ಮೊದಲ ಪೀಳಿಗೆಯ ಮಕ್ಕಳಿಗೆ ಸಾಕ್ಷರತೆಯ ಪ್ರಾಮುಖ್ಯತೆಯ ಅರಿವನ್ನು ಮೂಡಿಸಬೇಕಾಗಿರುವುದು ಅತ್ಯಗತ್ಯ.

ಈ ಎಲ್ಲವನ್ನು ಸಾಧಿಸಲು ಸಾಕಷ್ಟು ಸಮಯಬೇಕು. ತರಗತಿಯೊಳಗೆ ಸಮಯ ಮತ್ತು ಸ್ಥಳ ಎರಡೂ ಲಭ್ಯವಿರುವಂತೆ ಏರ್ಪಾಟು ಮಾಡಿಕೊಳ್ಳಬೇಕು. ಮುಂದಿನ ಭಾಗದಲ್ಲಿ ನಾವು ಹೀಗೆ ಮಾಡಲು ಅಗತ್ಯವಿರುವ ವಿಧಾನಗಳನ್ನು ಸೂಚಿಸುತ್ತೇವೆ.

**ಸಮಯ ಒದಗಿಸುವುದು: "ವಿಭಾಗ" ಮಾಡುವುದು**

ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು ಪ್ರಕಟಿಸಿರುವ *ಪಡೇ ಭಾರತ್ ಬಡೇ ಭಾರತ್* (ಓದುವ ಭಾರತ ದೊಡ್ಡ ಭಾರತ) ವರದಿಯು, ಪ್ರಾಥಮಿಕ ಶಾಲೆಗಳ ಆರು ಗಂಟೆಗಳ ಶಾಲಾ ದಿನದಲ್ಲಿ ಕೊನೇಪಕ್ಷ ದಿನಕ್ಕೆ ಎರಡೂವರೆ ಗಂಟೆಗಳು ಆರಂಭಿಕ ಭಾಷೆ ಮತ್ತು ಸಾಕ್ಷರತೆಗಾಗಿ ಮೀಸಲಾಗಿರಬೇಕೆಂದು ಶಿಫಾರಸ್ಸು ಮಾಡುತ್ತದೆ. ಭಾಷೆಯೇ ಎಲ್ಲಾ ಕಲಿಕೆಗೆ ತಳಹದಿ, ಶಾಲಾ ಆರಂಭದ

ವರ್ಷಗಳಲ್ಲಿ ಭಾಷಾ ಕಲಿಕೆಗೆ ಆದ್ಯತೆ ನೀಡಬೇಕು. ಒಂದು ವೇಳೆ ಇಷ್ಟು ಸಮಯ ಒದಗಿಸಲು ಆಗದಿದ್ದರೆ ಒಂದೂವರೆ ಗಂಟೆಯನ್ನಾದರೂ (90 ನಿಮಿಷ) ಭಾಷೆ ಮತ್ತು ಸಾಕ್ಷರತೆ ಕಲಿಸಲು ಮೀಸಲಿಡಬೇಕು. ವಾರದ ವೇಳಾಪಟ್ಟಿಯನ್ನು ವಿವಿಧ "ವಿಭಾಗ"ಗಳನ್ನಾಗಿ ವಿಂಗಡಿಸಿಕೊಳ್ಳಿ. ಕಡಿಮೆಯೆಂದರೆ ವಾರಕ್ಕೆ ನಾಲ್ಕು "ವಿಭಾಗ"ಗಳನ್ನು ಜೋರಾಗಿ ಓದಲು, ಪದರಚನೆ, ಮಾರ್ಗದರ್ಶಿತ ಓದು ಮತ್ತು ಬರಹಕ್ಕೆ ಮೀಸಲಿರಿಸಬೇಕು. ಇದರೊಂದಿಗೆ ಸ್ವತಂತ್ರ ಓದುವ/ಬರೆಯುವ ಸಮಯಗಳನ್ನು ಗೃಹಕಾರ್ಯ ಮತ್ತು ಗ್ರಂಥಾಲಯ ಅವಧಿಗಳಲ್ಲಿ ಹೊಂದಿಸಬೇಕು. ಪ್ರತಿಯೊಂದು ವಿಭಾಗವು 30 ನಿಮಿಷಗಳಿದ್ದು, ದಿನಕ್ಕೆ ಮೂರು ಇಂಥ ವಿಭಾಗಗಳಿರುತ್ತವೆ, ವಾರಕ್ಕೆ 15 ಭಾಗಗಳು ಮತ್ತು 1 ಗ್ರಂಥಾಲಯಕ್ಕಾಗಿ ಇರುತ್ತವೆ. ಕೋಷ್ಟಕ 1 ಸಮಯವನ್ನು ವಿಭಾಗ ಮಾಡುವ ಒಂದು ಮಾದರಿಯನ್ನು ತೋರಿಸುತ್ತದೆ, ಶಿಕ್ಷಕರು ಇದನ್ನು ಅನುಸರಿಸಬಹುದು.

ಕೋಷ್ಟಕ 1

ಮಾದರಿ ವೇಳಾಪಟ್ಟಿ

<table>
<tr><th></th><th>ಸೋಮವಾರ</th><th>ಮಂಗಳವಾರ</th><th>ಬುಧವಾರ</th><th>ಗುರುವಾರ</th><th>ಶುಕ್ರವಾರ</th></tr>
<tr><td>ವಿಭಾಗ 1<br>(30 ನಿಮಿಷಗಳು)</td><td>ಜೋರಾಗಿ ಓದು/ ಜೊತೆಗೂಡಿ ಓದು</td><td>ಜೋರಾಗಿ ಓದು/ ಜೊತೆಗೂಡಿ ಓದು</td><td>ಮಾದರಿ/ ಜೊತೆಗೂಡಿ ಬರಹ</td><td>ಜೋರಾಗಿ ಓದು/ ಜೊತೆಗೂಡಿ ಓದು</td><td>ಜೋರಾಗಿ ಓದು/ ಜೊತೆಗೂಡಿ ಓದು</td></tr>
<tr><td colspan="6">ಇಲ್ಲಿ ಮಕ್ಕಳು ಏನು ಕಲಿಯುತ್ತಾರೆ?<br>• ಅರ್ಥಗ್ರಹಿಕೆ<br>• ಮೌಖಿಕ ಭಾಷೆಯ ಬೆಳವಣಿಗೆ<br>• ಶಬ್ದಸಂಪತ್ತು<br>• ಸಾಹಿತ್ಯ ಆಸ್ವಾದನೆ (ವಿವಿಧ ಸಾಹಿತ್ಯ ರೂಪಗಳು)<br>• ಮುದ್ರಣ ಪರಿಕಲ್ಪನೆ– ಮುದ್ರಣವೆಂದರೆ ಏನು?<br>• ವಿಮರ್ಶಾತ್ಮಕ ಓದು</td></tr>
<tr><td>ವಿಭಾಗ 2<br>(30 ನಿಮಿಷಗಳು)</td><td>ಪದ ರಚನೆ</td><td>ಪದ ರಚನೆ</td><td>ಪದ ರಚನೆ</td><td>ಪದ ರಚನೆ</td><td>ಪದ ರಚನೆ</td></tr>
<tr><td colspan="6">ಇಲ್ಲಿ ಮಕ್ಕಳು ಏನು ಕಲಿಯುತ್ತಾರೆ?<br>• ಧ್ವನಿವಿಜ್ಞಾನದ ಅರಿವು<br>• ಧ್ವನಿಗಳು<br>• ಶಬ್ದಸಂಪತ್ತು</td></tr>
<tr><td>ವಿಭಾಗ 3<br>(30 ನಿಮಿಷಗಳು)</td><td>ಮಾರ್ಗದರ್ಶಿತ ಓದು</td><td>ಮಾರ್ಗದರ್ಶಿತ ಓದು</td><td>ಮಾರ್ಗದರ್ಶಿತ ಓದು</td><td>ಮಾರ್ಗದರ್ಶಿತ ಬರಹ</td><td>ಮಾರ್ಗದರ್ಶಿತ ಬರಹ</td></tr>
</table>

| | | |
|---|---|---|
| | ಇಲ್ಲಿ ಮಕ್ಕಳು ಏನು ಕಲಿಯುತ್ತಾರೆ?<br>• ನಿರರ್ಗಳತೆ<br>• ಅರ್ಥಗ್ರಹಿಕೆ<br>• ಶಬ್ದಸಂಪತ್ತು | ಇಲ್ಲಿ ಮಕ್ಕಳು ಏನು ಕಲಿಯುತ್ತಾರೆ?<br>• ಚೆನ್ನಾಗಿ ಬರೆಯುವ ಕೌಶಲ<br>• ಸಾಹಿತ್ಯದ ವಿವಿಧ ಪ್ರಕಾರಗಳನ್ನು ಅರ್ಥಮಾಡಿಕೊಳ್ಳುತ್ತಾರೆ<br>• ಶಬ್ದಸಂಪತ್ತು ಮತ್ತು ಅರ್ಥಗ್ರಹಿಕೆ |

ಶಾಲೆಯಲ್ಲಿ ಭಾಷಾ ಬೋಧನೆಗೆ ದಿನವೂ ಒಂದೂವರೆ ಗಂಟೆ ಸಮಯ ಸಿಕ್ಕರೆ, ಪ್ರತಿನಿತ್ಯ ಕತೆ ಓದಿ ಹೇಳಬೇಕೆಂದು ಮತ್ತು ಮಾರ್ಗದರ್ಶಿತ ಓದು ಮತ್ತು ಬರಹದ ಸಮಯವನ್ನೂ ಹೆಚ್ಚಿಸಿ ಎಂದು ನಾವು ಶಿಫಾರಸ್ಸು ಮಾಡುತ್ತೇವೆ. ಮಕ್ಕಳು ಗ್ರಂಥಾಲಯದಿಂದ ಪುಸ್ತಕಗಳನ್ನು ಎರವಲು ಪಡೆದು ಮನೆಯಲ್ಲಿ ಅಥವಾ ಶಾಲೆಯಲ್ಲಿ ಸಿಗುವ ಬಿಡುವಿನ ವೇಳೆಯಲ್ಲಿ ಸ್ವತಂತ್ರವಾಗಿ ಓದುತ್ತಾರೆ ಎಂದು ನಾವು ಭಾವಿಸುತ್ತೇವೆ.

**ಸ್ಥಳಾವಕಾಶ ಮಾಡುವುದು**

ಸ್ಥಳಾವಕಾಶ ಮಾಡಲು ಈ ಸರಳ ವಿಧಾನಗಳನ್ನು ಅನುಸರಿಸಿ:

1. ತರಗತಿ ಕೋಣೆಯ ಗೋಡೆಗಳಲ್ಲಿ ಮಕ್ಕಳು ಬರೆದ ಬರಹ, ಬಿಡಿಸಿದ ಚಿತ್ರ, ಅವರಿಗೆ ಕಲಿಸಬೇಕಾದ ಹೊಸ ಪದಗಳು, ಮಕ್ಕಳು ಅನುಸರಿಸಬೇಕಾದ ನಿಯಮಗಳು ಮುಂತಾದವುಗಳನ್ನು ಪ್ರದರ್ಶಿಸಿ. ತರಗತಿಯೊಳಗಿರುವ ಎಲ್ಲಾ ವಸ್ತುಗಳಿಗೂ ಹೆಸರು ಬರೆದು ಅಂಟಿಸುವುದು.
2. ಎಲ್ಲಾ ವಸ್ತುಗಳನ್ನು ಸಣ್ಣಸಣ್ಣ ಡಬ್ಬಗಳಲ್ಲಿ ಹಾಕಿಡುವುದು. ಬಳಸಲು ಬೇಕಾದಾಗ ಸುಲಭವಾಗಿ ಕೈಗೆ ಸಿಗುತ್ತವೆ ಮತ್ತು ಬಳಸದಿದ್ದಾಗ ಸುರಕ್ಷಿತವಾಗಿ ಎತ್ತಿಡಬಹುದು. "ಬರಹದ ಡಬ್ಬ"ವು ಮಕ್ಕಳಿಗೆ ಬರೆಯಲು ಬೇಕಾದ ಎಲ್ಲಾ ಸಾಮಗ್ರಿಗಳನ್ನು ಪೆನ್ಸಿಲ್, ಕ್ರೆಯಾನ್, ಅಳಿಸುವ ರಬ್ಬರ್, ಅಂಟಿಸಲು ಗೋಂದು ಮುಂತಾಗಿ ಹೊಂದಿರಬೇಕು. "ಪದ ಡಬ್ಬ"ವು ಪ್ರತ್ಯೇಕವಾಗಿ ಕತ್ತರಿಸಿದ ಅಕ್ಷರಗಳ ಕಾರ್ಡು, ವಯಸ್ಸಿಗೆ ತಕ್ಕ ಪದಗಳ ಆಟವಾಡಲು ಬೇಕಾದ ಭಾಷಾ ಸಾಮಗ್ರಿಗಳನ್ನು ಹೊಂದಿರಬೇಕು. ಅಕ್ಷರ ತಿದ್ದಲು ಮರಳಿನ ತಟ್ಟೆಗಳು, ಪೋಣಿಸಲು ಮಣಿಗಳ ಡಬ್ಬ ಮತ್ತು "ಓದಿನ ಡಬ್ಬ"ದಲ್ಲಿ ವೈವಿಧ್ಯಮಯ ಮಕ್ಕಳ ಪುಸ್ತಕಗಳನ್ನು ಇಟ್ಟಿರಬೇಕು.
3. ತರಗತಿಯೊಳಗೆ ಉದ್ದಕ್ಕೂ ದಾರ ಕಟ್ಟಿ ಪುಸ್ತಕಗಳನ್ನು ತೂಗುಹಾಕುವುದು, ಇಲ್ಲಿಂದ ಪುಸ್ತಕಗಳನ್ನು ತೆಗೆದುಕೊಂಡು ಓದಿ ಹೇಳುವ ಚಟುವಟಿಕೆ ಮಾಡಬಹುದು. ಹಾಗೆ ಪುಸ್ತಕಗಳನ್ನು ಪ್ರದರ್ಶಿಸಿದಾಗ ಆಸಕ್ತಿಯಿಂದ ಮಕ್ಕಳು ಅವುಗಳನ್ನು ತಿರುವಿ ಹಾಕುತ್ತಾರೆ. ಈ ಪುಸ್ತಕಗಳನ್ನು ವಾರಕ್ಕೊಂದು ಸಲ ಬದಲಾಯಿಸುತ್ತಿರಬೇಕು.
4. ತರಗತಿ ಕೋಣೆಯು ದೊಡ್ಡದಾಗಿದ್ದರೆ "ಓದುವ ಮೂಲೆ" ಮತ್ತು "ಬರೆಯುವ ಮೂಲೆ" ಎಂದು ಜಾಗವನ್ನು ಗುರುತಿಸಿ, ಮಕ್ಕಳನ್ನು ಆಕರ್ಷಿಸುವಂತೆ ಅದಕ್ಕೆ ಬೇಕಾಗುವ ಸಾಮಗ್ರಿಗಳನ್ನು ಜೋಡಿಸಿಡುವುದು.
5. ಪ್ರತಿ ಮಗುವಿಗೂ ಒಂದೊಂದು ದಸ್ತಾವೇಜು ಇಡುವುದು ಮತ್ತು ಅಲ್ಲಿ ಆ ಮಕ್ಕಳ ಎಲ್ಲಾ ಚಟುವಟಿಕೆಗಳನ್ನು (ಉದಾ; ಬರಹಗಳು, ಬಿಡಿಸಿದ ಚಿತ್ರಗಳು) ಜೋಡಿಸಿಡುವುದು. ಅದರೊಂದಿಗೆ ಶಿಕ್ಷಕರು ಆ ಮಗುವಿನ ಮಾಡಿಕೊಂಡಿರುವ ಸ್ವಂತ ಟಿಪ್ಪಣಿಗಳು ಮತ್ತು ಮೌಲ್ಯಮಾಪನ ಮಾಡಿದ ನೋಟ್ಸ್ ಗಳನ್ನು ಇಡುವುದು.

**ಉಪಸಂಹಾರ**

ನಾವಿಲ್ಲಿ ಶಿಕ್ಷಕರ (ಅಥವಾ ವಾಸಂತಿ) ಪ್ರಶ್ನೆಗಳಿಗ, ಅಂದರೆ ಶಿಕ್ಷಕಿ ಹೇಗೆ ತನ್ನ ತರಗತಿಯಲ್ಲಿರುವ ವಿಭಿನ್ನ, ವಿಶಿಷ್ಟ, ಅಮೂಲ್ಯ ಕಲಿಕಾರ್ಥಿಗಳಿಗೆ ಕಲಿಸಬಹುದು ಎಂಬುದಕ್ಕೆ ಸರಳ ಉತ್ತರಗಳನ್ನು ನೀಡಿಲ್ಲ. ಬಹುಶಃ ನಾವು ವಾಸಂತಿಯವರ ಅನೇಕ ಪ್ರಶ್ನೆಗಳಿಗೆ ಉತ್ತರಿಸಿಲ್ಲ. ಆದರೆ, ನಾವು ಬಹಳ ವಿಶಾಲಾರ್ಥದಲ್ಲಿ ಅವರು ಎತ್ತಿದ ಪ್ರಶ್ನೆಗಳಿಗೆ ಉತ್ತರ ಹುಡುಕುವ, ಸೂಕ್ತ ರೀತಿಯಲ್ಲಿ ವಿದ್ಯಾರ್ಥಿಗಳನ್ನು ತಲುಪಲು ಸಾಧ್ಯವಾಗಬಹುದಾದ ವಿವಿಧ ವಿಧಾನಗಳನ್ನು ಪರಿಚಯಿಸಿದ್ದೇವೆ.

ನಾವಿಲ್ಲಿ ಎರಡು ಕಾರ್ಯಗಳನ್ನು ಮಾಡಲು ಪ್ರಯತ್ನಿಸಿದ್ದೇವೆ. ಒಂದು, ಬಹಳ ವಿಶಾಲಾರ್ಥದಲ್ಲಿ ಒಂದು ಚೌಕಟ್ಟನ್ನು ಸೂಚಿಸಿದ್ದೇವೆ, ಬೋಧನೆಯನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು, ತಮ್ಮತಮ್ಮ ತರಗತಿಯೊಳಗೆ ಶಿಕ್ಷಕರು ಅಗತ್ಯವಿರುವಂತೆ ಅನುಸರಿಸಲು ವಿವಿಧ ವಿಧಾನಗಳನ್ನು ಒದಗಿಸಿದ್ದೇವೆ. ಸಮಗ್ರ ಸಾಕ್ಷರತಾ ಚೌಕಟ್ಟು  ಒಂದು ಸಂತುಲಿತ ವಿಧಾನವಾಗಿದ್ದು, ಅದು ಓದಿನ ಮೂಲ ಮಂತ್ರಗಳನ್ನು ಗಳಿಸಿಕೊಳ್ಳಲು ಮತ್ತು ಸ್ವಂತವಾಗಿ ಅಕ್ಷರಗಳನ್ನು ಗುರುತಿಸಿ, ಅಕ್ಷರಕ್ಕೂ ಶಬ್ದಕ್ಕೂ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳಲು, ಅದನ್ನು ಗ್ರಹಿಸಲು, ಅರ್ಥೈಸಿಕೊಳ್ಳಲು  ಬೇಕಾದ ತಂತ್ರಗಳನ್ನು ಒದಗಿಸುತ್ತದೆ. ಇದು ಸಾಹಿತ್ಯದ ವಿವಿಧ ಪ್ರಕಾರಗಳಿಗೆ, ವೈವಿಧ್ಯಮಯ ಮುದ್ರಿತ ಪಠ್ಯಗಳಿಗೆ ಮಕ್ಕಳನ್ನು ಪರಿಚಯಿಸಬೇಕೆಂಬುದನ್ನು ಒತ್ತಿ ಹೇಳುತ್ತದೆ. ಇದು ಓದುವ, ಬರೆಯುವ, ಆಲಿಸುವ ಮತ್ತು ಮಾತನಾಡುವ ಭಾಷಾ ಕೌಶಲಗಳಿಗೆ ಅಗತ್ಯವಾಗಿರುವ ಚಟುವಟಿಕೆಗಳಿಗೆ ಆಸ್ಪದ ನೀಡುತ್ತದೆ. ಇದು ಮೊದಲು ಶಿಕ್ಷಕರು ಮಾದರಿಯಾಗಿ ನಂತರ ಮಕ್ಕಳೊಡನೆ ಕೂಡಿ ಕೆಲಸ ಮಾಡುವ (ಜೊತೆಗೂಡಿ ಮತ್ತು ಮಾರ್ಗದರ್ಶಿತ ಓದು, ಬರಹ ರೂಪಗಳು) "ಕ್ರಮಾನುಗತವಾಗಿ ಜವಾಬ್ದಾರಿಯನ್ನು ಬಿಟ್ಟುಕೊಡುವ", ಆನಂತರವೇ ಮಕ್ಕಳು ಸ್ವತಂತ್ರವಾಗಿ ಕಲಿಯಬಲ್ಲರು ಎಂದು ನಿರೀಕ್ಷಿಸಬೇಕು ಎಂಬ ಮಾದರಿಯನ್ನು (ಡ್ಯೂಕ್ ಮತ್ತು ಪಿಯರ್ಸನ್, 2002) ಅನುಸರಿಸುತ್ತದೆ. ಇದು ಶಿಕ್ಷಕರು ಮಾದರಿಯಾಗುವ ಅನೇಕ ಅವಕಾಶಗಳನ್ನು ಒದಗಿಸುತ್ತದೆ ಮತ್ತು ಮಕ್ಕಳು ಅಭ್ಯಾಸ ಮಾಡಲು ಮತ್ತು ಕಲಿಯಲು ಅವರ ಜ್ಞಾನವನ್ನು ಉಪಯೋಗಿಸಲು ಸಾಕಷ್ಟು ಅವಕಾಶ ಒದಗಿಸುತ್ತದೆ.

ಎರಡು, ಈ ಕೈಪಿಡಿಯಲ್ಲಿ ಮಕ್ಕಳಿಗೆ ಓದಲು ಬರೆಯಲು ಕಲಿಸಲು ಯಾವುದೇ ಒಂದು ವಿಧಾನ ಅಥವಾ ಒಂದು ತಂತ್ರವನ್ನು ತಿಳಿದುಕೊಳ್ಳುವುದಲ್ಲ ಎಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದೇವೆ ಎಂದು ಆಶಿಸುತ್ತೇವೆ. ಅದು ಆಳವಾದ ತಿಳಿವಳಿಕೆಯನ್ನು, ವೈವಿಧ್ಯಮಯ ತಂತ್ರಗಳನ್ನು, ದೃಷ್ಟಿಕೋನಗಳನ್ನು ಮತ್ತು ಇವೆಲ್ಲವನ್ನು ಸಮತೋಲನದಲ್ಲಿರಿಸಿ ಸಮಗ್ರ ಸ್ವರೂಪದ ಸಾಕ್ಷರತೆಯನ್ನು ತರಗತಿಯೊಳಗೆ ಸಾಧಿಸುವ ಕೌಶಲವಾಗಿದೆ. ಮಕ್ಕಳು ಲಿಪಿಯನ್ನು ಸ್ಪಷ್ಟವಾಗಿ ಓದಿ, ಗುಂಡಾಗಿ ಬರೆದರೆ ಅಥವಾ ಪದಗಳನ್ನು ಸರಿಯಾಗಿ ಉಚ್ಚರಿಸಿದರೆ ಅವರು ಉತ್ತಮ ಓದು ಬರಹವನ್ನು ತಿಳಿದವರೆಂದು ಅರ್ಥವಲ್ಲ. ಮಕ್ಕಳನ್ನು ಉತ್ತಮ ಸಾಹಿತ್ಯವನ್ನು ಓದುವಂತೆ, ಮಾದರಿಗಳನ್ನು ಒದಗಿಸುವ ಮೂಲಕ ಮಾರ್ಗದರ್ಶನ ನೀಡಿ ವಿವಿಧ ರೀತಿಯಲ್ಲಿ ಕೌಶಲಪೂರ್ಣ ಓದುಗರಾಗಿ, ಬರಹಗಾರರಾಗುವಂತೆ ತಯಾರಿಸಬೇಕು. ನಾವು ಈ ರೀತಿಯಲ್ಲಿ ಸಾಧನೆ ಮಾಡಲು ಸಾಧ್ಯ ಎಂದು ಶಿಕ್ಷಕರಿಗೆ ಮನವರಿಕೆ ಮಾಡಲು ಪ್ರಯತ್ನಿಸಿದ್ದೇವೆ. ಇದು ಕೇವಲ ಸಾಧ್ಯತೆಯ ವಿಚಾರ ಮಾತ್ರವಲ್ಲ, ನಿಜವಾಗಿಯೂ ಮಕ್ಕಳು ಸಾಕ್ಷರರಾಗುವಂತೆ ಮಾಡಲು ಅದು ಬಹಳ ಅವಶ್ಯಕ.

ಕೊನೆಯದಾಗಿ ಮತ್ತೊಂದು ಮುಖ್ಯ ವಿಚಾರ, ಈ ಚೌಕಟ್ಟನ್ನು ಅಥವಾ ಮತ್ತೊಂದನ್ನು ವಿಧಾನವನ್ನು ಓದಿ ಕೇವಲ ಯಾಂತ್ರಿಕವಾಗಿ ಅನುಸರಿಸಿದರೆ ಪ್ರಯೋಜನವಿಲ್ಲ. ಸಮತೋಲನ ಸಾಧಿಸುವುದೆಂದರೆ "ಒಂದೇ ಅಳತೆ ಎಲ್ಲದಕ್ಕೂ ಸರಿ" ಎಂದು ಅಲ್ಲ (ಫಿಟ್ಜೆರಾಲ್ಡ್ 1999). ತಮ್ಮನ್ನು ತಾವು ಸದಾ

ಪರೀಕ್ಷಿಸಿಕೊಳ್ಳುವ ಶಿಕ್ಷಕರು ತಮ್ಮ ತರಗತಿಗೆ ಸೂಕ್ತವಾಗುವ ವಿಧಾನಗಳನ್ನು ಅನುಸರಿಸುತ್ತ ಸತತವಾಗಿ ಕಲಿಯುತ್ತಲೇ ಇರಬೇಕು.

***

**ಕೊನೆ ಟಿಪ್ಪಣಿಗಳು:**

[1] ಧ್ವನಿವಿಜ್ಞಾನವನ್ನು ಬೋಧಿಸಲು ಮತ್ತು ಇತರ ಪ್ರಮುಖ ಅಂಶಗಳಿಗಾಗಿ ನೋಡಿ, ಇಎಲ್ ಐ ಸಂಕ್ಷಿಪ್ತ ವರದಿ 5, "ಪೂರ್ವ ಪ್ರಾಥಮಿಕ ತರಗತಿಗಳಲ್ಲಿ ಧ್ವನಿವಿಜ್ಞಾನದ ಅರಿವು ಮೂಡಿಸುವುದು"

[2] ಜೋರಾಗಿ ಓದಿ ಹೇಳುವ ತರಗತಿಯ ವಿವರಕ್ಕಾಗಿ ನೋಡಿ ಇಎಲ್ ಐ ಸಂಕ್ಷಿಪ್ತ ವರದಿ 9

[3] ಚಿಕ್ಕ ಮಕ್ಕಳಿಗಾಗಿ ಕತೆಪುಸ್ತಕಗಳನ್ನು ಓದಲು ಭಾರತೀಯ ಪ್ರಕಾಶರಿಗಾಗಿ ಮತ್ತು ಆನ್ ಲೈನ್ ಪುಸ್ತಕಗಳಿಗಾಗಿ ನೋಡಿ; www.goodbooks.in and www.storyweaver.org.in

[4] ನೋಡಿ : ಉತ್ತಮ ಪುಸ್ತಕಗಳನ್ನು ಆರಿಸಲು ರಾಷ್ಟ್ರೀಯ ಮಕ್ಕಳ ಸಾಹಿತ್ಯ ಕೇಂದ್ರ (ಎನ್ ಸಿಸಿ ಎಲ್ 2012) ಗೈಡ್ ಬುಕ್ಸ್ ಮತ್ತು ಗೈಡ್ ಟು ಗುಡ್ ಬುಕ್ಸ್: ಮಕ್ಕಳಿಗಾಗಿ ಪುಸ್ತಕಗಳನ್ನು ಆರಿಸಲು ಗಮನಿಸಬೇಕಾದ ಅಂಶಗಳು

[5] ದಯವಿಟ್ಟು ಇಎಲ್ ಐ ಬ್ಲಾಗ್ ನೋಡಿ: :ಫ್ರಮ್ ಥಿಯರಿ ಟು ಪ್ರಾಕ್ಟಿಸ್: ರೀಡಿಂಗ್ ಸ್ಟ್ರ್ಯಾಟೀಜಿಸ್ ಟು ಫ್ಲುಯೆನ್ಸಿ ಅಂಡ್ ಕಾಂಪ್ರಿಹೆನ್ಷನ್", ಮಾರ್ಗದರ್ಶಿತ ಓದು ಬೋಧನೆಗೆ ಮೇಲ್ನೋಟ ನೀಡುತ್ತದೆ.

[6] ನೋಡಿ, ಇಎಲ್ ಐ ಸಂಕ್ಷಿಪ್ತ ವರದಿ 7 ನ್ನು ತರಗತಿಯಲ್ಲಿ ಪುಸ್ತಕಗಳನ್ನು ಜೋಡಿಸಿಡಲು; ನೋಡಿ; ಇಎಲ್ ಐ ಸಂಕ್ಷಿಪ್ತ ವರದಿ 11, ಮಕ್ಕಳನ್ನು ಬರವಣಿಗೆಯಲ್ಲಿ ತೊಡಗಿಸುವ ವಿವರಗಳಿಗಾಗಿ

[7] ನೋಡಿ, ಇಎಲ್ ಐ ಸಂಕ್ಷಿಪ್ತ ವರದಿ 3, ಮಕ್ಕಳನ್ನು ಗ್ರಂಥಾಲಯ ಚಟುವಟಿಕೆಯಲ್ಲಿ ತೊಡಗಿಸಲು "ಪ್ರಮೋಟಿಂಗ್ ಲ್ಯಾಂಗ್ವೇಜ್ ಅಂಡ್ ಲಿಟ್ರಸಿ ಡೆವಲಪ್ಮೆಂಟ್ ಥ್ರೂ ಸ್ಕೂಲ್ ಲೈಬ್ರರೀಸ್"

[8] ಇಎಲ್ ಐ ಸಂಕ್ಷಿಪ್ತ ವರದಿ 8, ನೋಡಿ: ತರಗತಿಯೊಳಗೆ ಮುದ್ರಿತ ಸಾಮಗ್ರಿ ಒದಗಿಸಲು "ಕಿಯೇಟಿಂಗ್ ಎ ಪ್ರಿಂಟ್ ರಿಚ್ ಎನ್ವಿರಾನಮೆಂಟ್ ಇನ್ ದಿ ಕ್ಲಾಸ್"

[9] ಇಎಲ್ ಐ ಸಂಕ್ಷಿಪ್ತ ವರದಿ 6, ನೋಡಿ, ವಿವಿಧ ಬಗೆಯ ಚಟುವಟಿಕೆಗಳು, ಶಬ್ದ ಮತ್ತು ಅಕ್ಷರ ಸಂಬಂಧವನ್ನು ಬೋಧಿಸಲು "ಲರ್ನಿಂಗ್ ದಿ ಸ್ಕ್ರಿಪ್ಟ್"

[10] ಇಎಲ್ ಐ ಸಂಕ್ಷಿಪ್ತ ವರದಿ 10 ನೋಡಿ, ಮುದ್ರಿತ ಸಾಮಗ್ರಿಯನ್ನು ಒದಗಿಸಲು

[11] ಜಯರಾಮ್ ಕೆ, (2008 ಎ) ಅರ್ಲಿ ಲಿಟ್ರಸಿ ಪ್ರೋಗ್ರಾಮ್ ಪ್ರಾಜೆಕ್ಟ್, ಎಕ್ಸಪ್ಲೋರೆನ್ಸ್ ಅಂಡ್ ರಿಫ್ಲೆಕ್ಷನ್ಸ್ ಪಾರ್ಟ್ 1; ಥಿಯರಟಿಕಲ್ ಪ್ರೆಸ್ಪೆಕ್ಟೀವ್ಸ್, ಕಾಂಟೆಂಪೋರರಿ ಎಜುಕೇಷನ್ ಡೈಲಾಗ್ , 5 (2), 133–175

ಜಯರಾಮ್ ಕೆ (2008 ಬಿ) ಅರ್ಲಿ ಲಿಟ್ರಸಿ ಪ್ರೋಗ್ರಾಮ್ ಪ್ರಾಜೆಕ್ಟ್, ಎಕ್ಸಪ್ಲೋರೆನ್ಸ್ ಅಂಡ್ ರಿಫ್ಲೆಕ್ಷನ್ಸ್ ಪಾರ್ಟ್ 2; ಇಂಟರವೆನ್ಷನ್ಸ್ ಇನ್ ಹಿಂದಿ ಕ್ಲಾಸ್ ರೂಮ್ಸ್, ಕಾಂಟೆಂಪೋರರಿ ಎಜುಕೇಷನ್ ಡೈಲಾಗ್ , 5 (2), 175–212

[12] ಅವರದೇ ಮತ್ತಷ್ಟು ವಿವರಗಳಿಗಾಗಿ ನೋಡಿ: https://www.oelp.org/

[13] ಕೀರ್ತಿ ಜಯರಾಮ್ ಬರೆದಿರುವ ಬ್ಲಾಗ್ ಆನ್ ಬಿಲ್ಡಿಂಗ್ ಸ್ಕ್ರಿಪ್ಟ್ ನಾಲೆಡ್ಜ್ ವಿತಿನ್ ಬ್ಯಾಲೆನ್ಸ್ಡ್ ಲಿಟ್ರಸಿ ಫ್ರೇಮ್ ವರ್ಕ್, ನೋಡಿ: : http://eli.tiss.edu/oelps-approach-to-building-script-knowledge-in-beginning-readers-and-writers/

ಪರಾಮರ್ಶನೆಗಳು:

Centre for Early Childhood Education and Development (2016). *Early language and literacy in India: A position paper.* Delhi: Ambedkar University.

Duke, N. K., & Pearson, P. D. (2002). Effective practices for developing reading comprehension. In A. E. Farstup & S. J. Samuels (Eds.), *What research has to say about reading instruction* (pp. 205–242). Newark, DE: International Reading Association.
Ellery, V. (2009). *Creating strategic readers: Techniques for developing competency in phonemic awareness, phonics, fluency, vocabulary, and comprehension*. Newark, DE: International Reading Association.

Fitzgerald, J (1999). What is this thing called "balance"? *The Reading Teacher, 53*, 100-107.
Goodman, K. S. (1967). Reading: A psycholinguistic guessing game. *Journal of the Reading Specialist, 6*(4), 126-135.

Jayaram, K. (2012). Toward a conceptual framework for early literacy: A balanced and socially sensitive approach. *Language and Language Teaching, 1 (1),* 32-39.

Morrow, L. M., & In Gambrell, L. B. (2018). *Best practices in literacy instruction*. New York: The Guilford Press.

Ministry of Human Resource Development (2014). *Padhe Bharat Bhade Bharat: Early reading and writing with comprehension & early mathematics programme*.

http://ssa.nic.in/pabminutesdocuments/padhe%20Bharat%200Badhe%20Bharat.pdf
National Research Council (1998). *Preventing Reading Difficulties in Young Children*. Washington, DC: The National Academies Press. https://doi.org/10.17226/6023

Nettles, D. H. (2006). *Comprehensive literacy instruction in today's classrooms: The whole, the parts, and the heart*. Boston: Pearson/Allyn and Bacon.

ಲೇಖಕರು: ಶೈಲಜಾ ಮೆನನ್, ಹರ್ಷಿತಾ ವಿ. ದಾಸ್
ಪರಿಕಲ್ಪನೆ ಮತ್ತು ಸಂಪಾದನೆ: ಶೈಲಜಾ ಮೆನನ್
ಕರಡು ತಿದ್ದುವಿಕೆ: ಸಿಮ್ರಿತಾ ಥಕ್ಕರ್
ರೂಪರೇಷೆ ಮತ್ತು ವಿನ್ಯಾಸ: ಹರ್ಷಿತಾ ವಿ. ದಾಸ್